ಜೆಎಸ್‌ಎಸ್ ಮಹಾವಿದ್ಯಾಪೀಠ, ಮೈಸೂರು
JSS MAHAVIDYAPEETHA, MYSURU

# ಜೆಎಸ್‌ಎಸ್ ವಾರ್ತಾಪತ್ರ

ಮಾಸಪತ್ರಿಕೆ

# JSS VARTHAPATHRA

*Monthly Magzine*

ಸಂಪುಟ 3 ಸಂಚಿಕೆ 15 ಮಾರ್ಚ್ 2019

## ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಜಾತ್ರಾ ಮಹೋತ್ಸವ - 2019






ಸುತ್ತೂರು ಜಾತ್ರಾ ಮಹೋತ್ಸವದಲ್ಲಿ ಸಾಮೂಹಿಕ ವಿವಾಹ ಕಾರ್ಯಕ್ರಮವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯಸಾನ್ನಿಧ್ಯದಲ್ಲಿ ಮುಖ್ಯಮಂತ್ರಿಗಳಾದ ಶ್ರೀ ಎಚ್.ಡಿ. ಕುಮಾರಸ್ವಾಮಿಯವರು ಉದ್ಘಾಟಿಸಿದರು. ಚಿತ್ರದಲ್ಲಿ ಶ್ರೀ ಎಸ್. ಪುಟ್ಟರಾಜು, ಡಾ. ಶಾಮನೂರು ಶಿವಶಂಕರಪ್ಪ, ಡಾ. ಶ್ರೀಮತಿ ಸುಧಾಮೂರ್ತಿ, ಶ್ರೀಮತಿ ಅನಿತಾ ಕುಮಾರಸ್ವಾಮಿ, ಶ್ರೀ ಜಡೆಯ ಶಾಂತಲಿಂಗೇಶ್ವರ ಮಹಾಸ್ವಾಮಿಗಳು, ಶ್ರೀ ಸಿದ್ಧಲಿಂಗ ರಾಜದೇಶಿಕೇಂದ್ರ ಶಿವಾಚಾರ್ಯ ಸ್ವಾಮಿಗಳು, ಶ್ರೀ ಜಿ.ಟಿ. ದೇವೇಗೌಡ, ಶ್ರೀ ಸಾ.ರಾ. ಮಹೇಶ್, ಶ್ರೀ ಡಿ.ಸಿ. ತಮ್ಮಣ್ಣ, ಡಾ. ಯತೀಂದ್ರ ಸಿದ್ದರಾಮಯ್ಯ




ಸುತ್ತೂರು ಜಾತ್ರಾ ಮಹೋತ್ಸವದಲ್ಲಿ ನೆರವೇರಿದ ಕೃಷಿ ವಿಚಾರ ಸಂಕಿರಣದಲ್ಲಿ ಶಾಸಕರು ಹಾಗೂ ಮಾಜಿ ಸಚಿವರಾದ ಶ್ರೀ ದಿನೇಶ್ ಆರ್. ಗೂಡುರಾವ್ ಅವರು ಮಾತನಾಡುತ್ತಿರುವುದು




ಸುತ್ತೂರು ಜಾತ್ರಾ ಮಹೋತ್ಸವದಲ್ಲಿ ನೇರವೇರಿದ ಭಜನಾ ಮೇಳವನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯಸಾನ್ನಿಧ್ಯದಲ್ಲಿಮಾಜಿ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯ ನವರು ಉದ್ಘಾಟಿಸಿದರು. ಚಿತ್ರದಲ್ಲಿ ಶ್ರೀ ಪಿ.ಜಿ.ಆರ್. ಸಿಂಧ್ಯಾ, ಶ್ರೀ ದರ್ಶನ್ ತೂಗುದೀಪ, ಡಾ. ಎಚ್.ಸಿ. ಮಹದೇವಪ್ಪ, ಶ್ರೀ ಸಂದೇಶ್ ನಾಗರಾಜ್, ಡಾ. ಪುಷ್ಪಾ ಅಮರನಾಥ್ ಮೊದಲಾದವರಿದ್ದಾರೆ

# ಸುತ್ತೂರು ಜಾತ್ರಾ ಮಹೋತ್ಸವ -2019

ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಜಾತ್ರಾ ಮಹೋತ್ಸವವು ಫೆಬ್ರವರಿ 1ರಿಂದ 6ರವರೆಗೆ ಪರಮಪೂಜ್ಯ ಜಗದ್ಗುರು ಶ್ರೀ ಶಿವರಾತ್ರಿ ದೇಶಿಕೇಂದ್ರ ಮಹಾಸ್ವಾಮಿಗಳವರ ದಿವ್ಯ ಸಾನ್ನಿಧ್ಯದಲ್ಲಿ ವಿಜೃಂಭಣೆಯಿಂದ ಜರುಗಿತು. ಜಾತ್ರಾ ಮಹೋತ್ಸವಕ್ಕೆ ನಾಡಿನ ವಿವಿಧ ಮಠಾಧೀಶರು, ಹರಗುರು ಚರಮೂರ್ತಿಗಳು, ಮುಖ್ಯಮಂತ್ರಿಗಳು, ಉಪಮುಖ್ಯ ಮಂತ್ರಿಗಳು, ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಮಂತ್ರಿಮಹೋದಯರು, ಅಧಿಕಾರಿಗಳು, ಗಣ್ಯರು ಮತ್ತು ಲಕ್ಷಾಂತರ ಭಕ್ತರು ಸಾಕ್ಷಿಯಾದರು.

**ದಿನಾಂಕ 1.2.2019 ರಂದು ವಸ್ತು ಪ್ರದರ್ಶನ, ಕೃಷಿಮೇಳ ಹಾಗೂ ಸಾಂಸ್ಕೃತಿಕ ಮೇಳಗಳನ್ನು** ಉದ್ಘಾಟಿಸಿದ ಆದಿಚುಂಚನಗಿರಿ ಮಠದ ಪರಮಪೂಜ್ಯ ಜಗದ್ಗುರು ಡಾ. ಶ್ರೀ ನಿರ್ಮಲಾನಂದನಾಥ ಮಹಾಸ್ವಾಮಿಗಳವರು "ಸುತ್ತೂರು ಜಾತ್ರೆಯು ಆಧುನಿಕ ಯುಗಕ್ಕೆ ಬೇಕಾಗಿರುವ ರೀತಿಯಲ್ಲಿ ಆಯೋಜನೆಗೊಳ್ಳುವ ಮೂಲಕ ಮಾದರಿ ಜಾತ್ರೆಯಾಗಿದೆ" ಎಂದು ಬಣ್ಣಿಸಿದರು.

ಮಾಜಿ ವಿಧಾನ ಸಭಾ ಸದಸ್ಯರಾದ ಶ್ರೀ ವಾಸುರವರು ಮಾತನಾಡಿ 'ಶ್ರೀಮಠವು ಬಡಮಕ್ಕಳ ಬದುಕಿಗೆ ದಾರಿದೀಪವಾಗಿದೆ' ಎಂದು ನುಡಿದರು. ಸಮಾರಂಭದಲ್ಲಿ ಶ್ರೀ ಎಚ್.ಎಸ್. ಸೋಮಶೇಖರ್, ಶ್ರೀ ಎಸ್.ಎ ಚಿನ್ನೇಗೌಡ, ಡಾ. ಸಿದ್ದಯ್ಯ, ಶ್ರೀಮತಿ ಶೀಲಾ ರಾಜಶೇಖರ್, ಡಾ. ಕವಿತಾ ಕೊಟ್ರಪ್ಪ, ಡಾ. ವಿಜಯಾಕೊಟ್ರಪ್ಪ ಮೊದಲಾದವರು ಉಪಸ್ಥಿತರಿದ್ದರು.

ದೇಸಿ ಆಟಗಳು, ದೋಣಿ ವಿಹಾರ, ರಂಗೋಲಿ, ಸೋಬಾನೆ ಪದ ಸ್ಪರ್ಧೆಗಳ ಉದ್ಘಾಟನೆ ನೆರವೇರಿಸಿ ಮಾತನಾಡಿದ ಸಾರಿಗೆ ಸಚಿವರಾದ ಶ್ರೀ ಡಿ.ಸಿ. ತಮ್ಮಣ್ಣನವರು ಜನಪದ ಕಲೆಯು ಎಲ್ಲಾ ಕಲೆಗಳಿಗೂ ತಾಯಿಬೇರಿನಂತೆ ಎಂದು ಅಭಿಪ್ರಾಯಪಟ್ಟರು.




ಸುತ್ತೂರು ಜಾತ್ರಾ ಮಹೋತ್ಸವದಲ್ಲಿ ವಸ್ತುಪ್ರದರ್ಶನ, ಕೃಷಿಮೇಳ ಹಾಗೂ ಸಾಂಸ್ಕೃತಿಕ ಮೇಳಗಳನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯಸಾನ್ನಿಧ್ಯದಲ್ಲಿ ಆದಿಚುಂಚನಗಿರಿ ಮಠದ ಪೂಜ್ಯ ಡಾ. ಶ್ರೀ ನಿರ್ಮಲಾನಂದ ಮಹಾಸ್ವಾಮಿಗಳು ಉದ್ಘಾಟಿಸಿದರು. ಚಿತ್ರದಲ್ಲಿ ಶ್ರೀ ಎಚ್.ಎಸ್ ಸೋಮಶೇಖರ್, ಶ್ರೀ ಎಸ್.ಎ. ಚಿನ್ನೇಗೌಡ, ಡಾ. ಸಿದ್ದಯ್ಯ, ಶ್ರೀ ವಾಸು, ಡಾ. ಶ್ರೀಮತಿ ಶೀಲಾರಾಜಶೇಖರ್, ಡಾ. ಕವಿತಾ ಕೊಟ್ರಪ್ಪ, ಡಾ. ವಿಜಯಾಕೊಟ್ರಪ್ಪ




ಶಾಸಕರು ಹಾಗೂ ಮಾಜಿ ಸಚಿವರಾದ ಶ್ರೀ ಎನ್. ಮಹೇಶ್ ಅವರು ದೇಸಿ ಆಟಗಳಿಗೆ ಚಾಲನೆ ನೀಡಿದರೆ ಮಾಜಿ ಸಚಿವರಾದ ಡಾ. ಗೀತಾ ಮಹದೇವಪ್ರಸಾದ್ ಅವರು ದೋಣಿ ವಿಹಾರಕ್ಕೆ ಚಾಲನೆ ನೀಡಿದರು. ಸಮಾರಂಭದಲ್ಲಿ ಶಾಸಕರು ಹಾಗೂ ಮಾಜಿ ಸಚಿವರಾದ ಶ್ರೀ ಅಲ್ಲಂ ವೀರಭದ್ರಪ್ಪ, ಮಾಜಿ ವಿಧಾನ ಸಭಾ ಸದಸ್ಯರಾದ ಶ್ರೀ ಮಹಿಮಾ ಜೆ. ಪಟೇಲ್, ಶಾಸಕರು ಹಾಗೂ ಕರ್ನಾಟಕ ರಾಜ್ಯ ಖನಿಜ ನಿಗಮದ ಅಧ್ಯಕ್ಷರಾದ ಶ್ರೀಮತಿ ಲಕ್ಷ್ಮೀ ಆರ್. ಹೆಬ್ಬಾಳ್ಕರ್, ಬೆಂಗಳೂರು ಮಹಾನಗರ ಪಾಲಿಕೆಯ ಮಹಾಪೌರರಾದ ಶ್ರೀಮತಿ ಗಂಗಾಂಬಿಕೆ ಮೊದಲಾದವರು ಭಾಗವಹಿಸಿದ್ದರು.

**ದಿನಾಂಕ 2.2.2019 ರಂದು** ಸಾಮೂಹಿಕ ವಿವಾಹ ಕಾರ್ಯಕ್ರಮವನ್ನು ಉದ್ಘಾಟಿಸಿದ ಮುಖ್ಯಮಂತ್ರಿಗಳಾದ ಶ್ರೀ ಎಚ್.ಡಿ. ಕುಮಾರಸ್ವಾಮಿಯವರು ಮಾತನಾಡಿ "ಸುತ್ತೂರು ಶ್ರೀಕ್ಷೇತ್ರದಲ್ಲಿ ಪೂಜ್ಯರ ಸಮ್ಮುಖದಲ್ಲಿ ದಾಂಪತ್ಯ ಜೀವನಕ್ಕೆ ಕಾಲಿಡುತ್ತಿರುವುದು ನಿಮ್ಮೆಲ್ಲರ ಸೌಭಾಗ್ಯ. ನಿಮ್ಮ ದಾಂಪತ್ಯ ಜೀವನ ನಿತ್ಯ ನವ ನವೀನವಾಗಿರಲಿ" ಎಂದು 182 ಜೋಡಿ ನೂತನ ದಂಪತಿಗಳಿಗೆ ಶುಭ ಹಾರೈಸಿದರು.

ಸಮಾರಂಭದಲ್ಲಿ ಉಜ್ಜಯಿನಿ ಜಗದ್ಗುರು ಶ್ರೀ ಸಿದ್ಧಲಿಂಗ ರಾಜದೇಶಿಕೇಂದ್ರ ಶಿವಾಚಾರ್ಯ ಭಗವತ್ಪಾದ ಮಹಾಸ್ವಾಮಿಗಳು, ನಿಂಬಾಳ ಶ್ರೀ ಶಾಂತಲಿಂಗೇಶ್ವರ ಮಠದ ಶ್ರೀ ಜಡೆಯ ಶಾಂತಲಿಂಗೇಶ್ವರ ಮಹಾಸ್ವಾಮಿಗಳು, ಪದ್ಮಶ್ರೀ ಡಾ. ಶ್ರೀಮತಿ ಸುಧಾಮೂರ್ತಿ, ಶಾಸಕರಾದ ಶ್ರೀಮತಿ ಅನಿತಾ ಕುಮಾರಸ್ವಾಮಿ, ಶ್ರೀ ಕೆ.ಟಿ. ಶ್ರೀಕಂಠೇಗೌಡ, ಶ್ರೀ ಸಿ. ಬೋಜೇಗೌಡ, ಸಚಿವರಾದ ಶ್ರೀ ಸಿ.ಎಸ್. ಪುಟ್ಟರಾಜು, ಶಾಸಕರು ಹಾಗೂ ಮಾಜಿ ಸಚಿವರಾದ ಡಾ. ಶಾಮನೂರು ಶಿವಶಂಕರಪ್ಪ, ಸಚಿವರಾದ ಶ್ರೀ ಜಿ.ಟಿ. ದೇವೇಗೌಡ, ಶ್ರೀ ಸಾ.ರಾ. ಮಹೇಶ್, ಶ್ರೀ ಡಿ.ಸಿ. ತಮ್ಮಣ್ಣ, ಶಾಸಕರಾದ ಡಾ. ಯತೀಂದ್ರ ಸಿದ್ದರಾಮಯ್ಯ ಮೊದಲಾದವರು ಉಪಸ್ಥಿತರಿದ್ದರು.

ರಾಜ್ಯಮಟ್ಟದ ಭಜನಾ ಮೇಳದ ಉದ್ಘಾಟನಾ ಸಮಾರಂಭದ ಸಮ್ಮುಖ ವಹಿಸಿದ್ದ ತಿಪಟೂರಿನ ಶ್ರೀ ಕೆರಗೋಡಿ ರಂಗಾಪುರ ಕ್ಷೇತ್ರದ ಶ್ರೀ ಗುರುಪರದೇಶಿಕೇಂದ್ರ ಮಹಾಸ್ವಾಮಿಗಳವರು "ಮಾನವ ತಾನು ಮಾಡುವ ಸೇವಾ ಕೆಲಸ ಕಾರ್ಯಗಳಿಂದಲೇ ಮಹಾದೇವನಾಗಬಹುದು" ಎಂದು ನುಡಿದರು.



ಚಿಕ್ಕೋಡಿಯ ಶ್ರೀ ಸಂಪಾದನ ಚರಮೂರ್ತಿ ಮಠದ ಶ್ರೀ ಸಂಪಾದನ ಸ್ವಾಮಿಗಳವರು ಆಶೀರ್ವಚನ ನೀಡಿದರು. ಸಮಾರಂಭದಲ್ಲಿ ಮಲ್ಲನ ಮೂಲೆ ಶ್ರೀಕ್ಷೇತ್ರದ ಶ್ರೀ ಚನ್ನಬಸವಸ್ವಾಮಿಗಳವರು, ಗೃಹ ಸಚಿವರಾದ ಶ್ರೀ ಎಂ.ಬಿ. ಪಾಟೀಲ್, ಶಾಸಕರು ಮತ್ತು ಮಾಜಿ ಮುಖ್ಯಮಂತ್ರಿಗಳಾದ ಶ್ರೀ ಸಿದ್ದರಾಮಯ್ಯ, ಚಿತ್ರ ನಟ ಶ್ರೀ ದರ್ಶನ್ ತೂಗುದೀಪ, ಶಾಸಕರು ಹಾಗೂ ಮಾಜಿ ಸಚಿವರಾದ ಶ್ರೀ ಈಶ್ವರ ಬಿ. ಖಂಡ್ರೆ ಮೊದಲಾದವರು ಮಾತನಾಡಿದರು.

ಸಚಿವರಾದ ಶ್ರೀ ಯು.ಟಿ. ಖಾದರ್, ಕರ್ನಾಟಕ ಪ್ರದೇಶ ಕಾಂಗ್ರೆಸ್ ಸಮಿತಿಯ ಮಹಿಳಾ ಘಟಕದ ಅಧ್ಯಕ್ಷರಾದ ಡಾ. ಪುಷ್ಪಾ ಅಮರನಾಥ್, ಶ್ರೀ ಸಂದೇಶ್ ನಾಗರಾಜ್ ಮೊದಲಾದವರು ಉಪಸ್ಥಿತರಿದ್ದರು.

**ದಿನಾಂಕ 3.3.2019 ರಂದು** ಧಾರ್ಮಿಕ ಸಭೆಯ ದಿವ್ಯ ಸಮ್ಮುಖ ವಹಿಸಿ ಶುಭ ಸಂದೇಶ ನೀಡಿದ ಸಿದ್ಧಗಂಗಾ ಮಠದ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳವರು "ಧರ್ಮವನ್ನು ಮನುಷ್ಯ ಎಂದಿಗೂ ಮರೆಯಬಾರದು, ಮರೆತರೆ ಮನುಷ್ಯನಿಗೂ, ಪ್ರಾಣಿಗಳಿಗೂ ಯಾವುದೇ ವ್ಯತ್ಯಾಸವಿರುವುದಿಲ್ಲ. ಮಾನವ ಅತಿ ಆಸೆಯಿಂದಾಗಿ ಶಾಂತಿ, ನೆಮ್ಮದಿಗಳನ್ನು ಕಳೆದುಕೊಂಡು ಬದುಕುತ್ತಿದ್ದಾನೆ. ಒಮ್ಮೆ ಕಳೆದುಕೊಂಡ ಶಾಂತಿ, ನೆಮ್ಮದಿಯನ್ನು ಮತ್ತೆ ಪಡೆಯುವುದು ಕಷ್ಟ ಸಾಧ್ಯ" ಎಂದು ನುಡಿದರು.

ಹುಬ್ಬಳ್ಳಿಯ ವರೂರಿನ ಶ್ರೀಕ್ಷೇತ್ರದ ಸ್ವಸ್ತಿಶ್ರೀ ಶ್ರೀ ಧರ್ಮಸೇನ ಭಟ್ಟಾರಕ ಪಟ್ಟಾಚಾರ್ಯ ಮಹಾಸ್ವಾಮಿಗಳವರು ಆಶೀರ್ವಚನ ನೀಡಿ "ಯಾವುದೇ ಜಾತಿ-ಮತ ಭೇದವಿಲ್ಲದೆ ಸರ್ವರನ್ನೂ ಪ್ರೀತಿಯಿಂದ ಪೊರೆಯುವ ಸುತ್ತೂರು ಶ್ರೀಕ್ಷೇತ್ರ ಅವಿಮುಕ್ತ ಕ್ಷೇತ್ರದಂತಿದೆ" ಎಂದು ಬಣ್ಣಿಸಿದರು.

ಧಾರ್ಮಿಕ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಕೇಂದ್ರ ಕೌಶಲಾಭಿವೃದ್ಧಿ ಮತ್ತು ಉದ್ಯಮ ಶೀಲತೆ ರಾಜ್ಯ ಸಚಿವರಾದ ಶ್ರೀ ಅನಂತಕುಮಾರ್ ದತ್ತಾತ್ರೇಯ ಹೆಗ್ಡೆಯವರು "ಜಗತ್ತಿನ ಇತರ ದೇಶಗಳ ಮಣ್ಣಿಗಿಂತ ಭಾರತದ ಮಣ್ಣಿಗೆ ತನ್ನದೇ ಆದ ಪಾವಿತ್ರತೆಯಿದೆ" ಎಂದು ನುಡಿದರು.

"ಧರ್ಮವು ಎಲ್ಲರನ್ನು ಒಂದುಗೂಡಿಸುವ ಹಾದಿಯಾಗಿದೆ" ಎಂದು ಮೈಸೂರಿನ ಕುಂದೂರು ಮಠದ ಡಾ. ಶ್ರೀ ಶರಚ್ಚಂದ್ರ ಸ್ವಾಮಿಗಳವರು ಶುಭ ಸಂದೇಶ ನೀಡಿದರು.

ಸಮಾರಂಭದಲ್ಲಿ ಮೈಸೂರಿನ ಶ್ರೀ ಹೊಸಮಠದ ಶ್ರೀ ಚಿದಾನಂದ ಸ್ವಾಮಿಗಳು, ಶ್ರೀ ಲಕ್ಷ್ಮೀ ಸೇನ ದಿಗಂಬರ ಜೈನ ಮಠದ ಶ್ರೀಗಳು, ಮೈಸೂರಿನ ಕ್ಯಾಥೋಲಿಕ್ ಧರ್ಮಪ್ರಾಂತ್ಯದ ಶ್ರೀ ರೆ. ಲೆಸ್ಲಿ ಮೊರಾಸ್, ದಕ್ಷಿಣ ಕನ್ನಡ ಜಿಲ್ಲೆಯ ಮುಲ್ಕಿ ಕೇಂದ್ರೀಯ ಜುಮಾ ಮಸೀದಿಯ ಶ್ರೀ ಎಸ್.ಟಿ. ಮಹಮ್ಮದ್ ದಾರಿಮಿ, ಸಾಲೂರು ಮಠದ ಶ್ರೀ ಗುರುಸ್ವಾಮಿಗಳು, ಅಡವಿ ಮಠದ ಶ್ರೀ ಶಿವಲಿಂಗೇಂದ್ರ ಸ್ವಾಮಿಗಳು ಹಾಗೂ ಶ್ರೀ ಕೆ.ಸಿ. ಕೊಂಡಯ್ಯ, ಶಾಸಕರಾದ ಶ್ರೀ ಅಮರೇಗೌಡ ಎಲ್. ಪಾಟೀಲ್ ಬಯ್ಯಾಪುರ ಮೊದಲಾದವರು ಉಪಸ್ಥಿತರಿದ್ದರು.

**ಚಿತ್ರಕಲೆ, ಗಾಳಿಪಟ ಸ್ಪರ್ಧೆ ಮತ್ತು ಐವತ್ತೊಂದನೆಯ ದನಗಳ ಜಾತ್ರೆಯ ಉದ್ಘಾಟನೆ ನೆರವೇರಿಸಿದ** ಕೋಡಿಮಠದ ಡಾ. ಶ್ರೀ ಶಿವಾನಂದ ಶಿವಯೋಗಿ ರಾಜೇಂದ್ರ ಮಹಾಸ್ವಾಮಿಗಳು "ಮಾನವನಿಗೆ ಧರ್ಮದಲ್ಲಿ ನಂಬಿಕೆಯಿರಬೇಕು" ಎಂದು ನುಡಿದರು.

ಶ್ರೀ ಮರಳೆಗವಿ ಮಠದ ಶ್ರೀ ಮುಮ್ಮಡಿ ಶಿವರುದ್ರ ಸ್ವಾಮಿಗಳವರು ಶುಭ ಸಂದೇಶ ನೀಡಿ "ಸರ್ವಜನಾಂಗದ ಶ್ರೇಯೋವೃದ್ಧಿ ಶ್ರೀಮಠದ ಸದಾಶಯವಾಗಿದೆ" ಎಂದು ನುಡಿದರು.

ಕೇಂದ್ರ ಸಚಿವರಾದ ಶ್ರೀ ಅಶ್ವಿನ್ ಕುಮಾರ್ ಚೌಬೆಯವರು ಮಾತನಾಡಿ "ಸದೃಢ ದೇಹದಿಂದ ಸದೃಢ ಮನಸ್ಸು ರೂಪುಗೊಳ್ಳುತ್ತದೆ" ಎಂದು ನುಡಿದರು.

ಸಮಾರಂಭದಲ್ಲಿ ವಾಟಾಳು ಮಠದ ಶ್ರೀ ಸಿದ್ಧಲಿಂಗ ಸ್ವಾಮಿಗಳು, ಮಾಜಿ ಸಚಿವರು ಹಾಗೂ ಶಾಸಕರಾದ ಶ್ರೀ ಎಸ್.ಎ. ರಾಮದಾಸ್, ಮಾಜಿ ಸಚಿವರಾದ ಶ್ರೀ ಎಂ. ಶಿವಣ್ಣ, ಶ್ರೀ ಆರ್. ಗಣೇಶ್, ಶ್ರೀ ರವೀಶ್‌ಗೌಡ ಮೊದಲಾದವರು ಉಪಸ್ಥಿತರಿದ್ದರು.

**ದಿನಾಂಕ 4.2.2019 ರಂದು** ಕೃಷಿ ವಿಚಾರ ಸಂಕಿರಣ ಉದ್ಘಾಟನಾ ಸಮಾರಂಭದ ಸಮ್ಮುಖ ವಹಿಸಿ ಆಶೀರ್ವಚನ ನೀಡಿದ ಕನಕಪುರ ಶ್ರೀ ದೇಗುಲ ಮಠದ ಡಾ. ಶ್ರೀ ಮುಮ್ಮಡಿ ನಿರ್ವಾಣ ಮಹಾಸ್ವಾಮಿಗಳವರು "ಸರ್ಕಾರಗಳು ಕೃಷಿಗೆ ಬಹಳಷ್ಟು ಯೋಜನೆಗಳನ್ನು ಜಾರಿಗೆ ತಂದಿದ್ದರೂ ಅವು ರೈತರಿಗೆ ತಕ್ಕ ಫಲ ನೀಡುತ್ತಿಲ್ಲ" ಎಂದು ಅಭಿಪ್ರಾಯಪಟ್ಟರು.

ಕೃಷಿ ಸಚಿವರಾದ ಶ್ರೀ ಎನ್. ಎಚ್. ಶಿವಶಂಕರರೆಡ್ಡಿಯವರು ವಿಚಾರ ಸಂಕಿರಣವನ್ನು ಉದ್ಘಾಟಿಸಿ ಮಾತನಾಡುತ್ತಾ "ಕೃಷಿ ಒಂದು ಸಂಕೀರ್ಣ ಕ್ಷೇತ್ರ" ಎಂದು ನುಡಿದರು.

ಶಾಸಕರು ಹಾಗೂ ಮಾಜಿ ಸಚಿವರಾದ ಶ್ರೀ ದಿನೇಶ್ ಆರ್. ಗುಂಡೂರಾವ್‌ರವರು ಮಾತನಾಡಿ 'ರೈತರು ಈ ದೇಶದ ಬೆನ್ನೆಲುಬು ಎಂಬುದು ಎಂದೆಂದಿಗೂ ಸತ್ಯ' ಎಂದು ನುಡಿದರು.

ಸಮಾರಂಭದಲ್ಲಿ ಪ್ರಗತಿಪರ ರೈತ ಶ್ರೀ ವಡ್ಡಗೆರೆ ಚಿನ್ನಸ್ವಾಮಿ, ಶ್ರೀ ಎ. ಕಾಂತರಾಜು, ಶ್ರೀ ಎಂ. ಶಿವಣ್ಣ, ಶ್ರೀ ಸಿ. ಅನಿಲ್‌ಕುಮಾರ್, ಡಾ. ಎಂ. ಮಹದೇವಪ್ಪ ಮೊದಲಾದವರು ಉಪಸ್ಥಿತರಿದ್ದರು.

ಕೃಷಿ ವಿಚಾರ ಸಂಕಿರಣದ ಸಮಾರೋಪ ಸಮಾರಂಭದಲ್ಲಿ ಆಶೀರ್ವಚನ ನೀಡಿದ ಉಡುಪಿಯ ಶ್ರೀ ಪೇಜಾವರ ಮಠದ ಶ್ರೀ ವಿಶ್ವೇಶ್ವರ ತೀರ್ಥ ಶ್ರೀ ಪಾದಂಗಳವರು ದೇಶದ ಸಂಸ್ಕೃತಿಯನ್ನು ಉಳಿಸಿ ಬೆಳೆಸುವಂತೆ ಕರೆ ನೀಡಿದರು.

ಸಮ್ಮುಖ ವಹಿಸಿದ್ದ ಮೈಸೂರಿನ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವವಿದ್ಯಾಲಯದ ಬ್ರಹ್ಮಕುಮಾರಿ ಲಕ್ಷ್ಮೀಜಿಯವರು 'ರೈತರು ದುಡಿಮೆಯಲ್ಲೇ ದೇವರನ್ನು ಕಾಣಬೇಕು' ಎಂದು ನುಡಿದರು.

ಶಿವಮೊಗ್ಗದ ಶ್ರೀ ಬಸವ ಕೇಂದ್ರದ ಶ್ರೀ ಬಸವ ಮರುಳಸಿದ್ದ ಸ್ವಾಮಿಗಳವರು ಶುಭಸಂದೇಶ ನೀಡಿ 'ರೈತರು ತಮ್ಮ ಸಾಮರ್ಥ್ಯವನ್ನು ಅರ್ಥ ಮಾಡಿಕೊಳ್ಳಬೇಕು' ಎಂದು ನುಡಿದರು.

ಸಮಾರಂಭದಲ್ಲಿ ಡಾ. ನಟರಾಜನ್ ಮತ್ತು ಶ್ರೀಮತಿ ಕವಿತಾ ಮಿಶ್ರಾರವರು ಉಪನ್ಯಾಸ ನೀಡಿದರು.

ಮಾಜಿ ಸಂಸದರಾದ ಶ್ರೀ ಎಂ. ಶಿವಣ್ಣ, ನಿವೃತ್ತ ಐಎಎಸ್ ಅಧಿಕಾರಿ ಡಾ. ಸಿ. ಸೋಮಶೇಖರ್, ವಿಧಾನ ಪರಿಷತ್ ಸದಸ್ಯರಾದ ಶ್ರೀ ಎಸ್. ರುದ್ರೇಗೌಡ, ಮಾಜಿ ವಿಧಾನ ಪರಿಷತ್ ಸದಸ್ಯರಾದ ಪ್ರೊ. ಕೆ.ಆರ್. ಮಲ್ಲಿಕಾರ್ಜುನಪ್ಪ ಮೊದಲಾದವರು ಉಪಸ್ಥಿತರಿದ್ದರು.

**ದಿನಾಂಕ 5.2.2019 ರಂದು ಭಜನಾಮೇಳ ಸಮಾರೋಪ ಸಮಾರಂಭದಲ್ಲಿ ಮಾತನಾಡಿದ** ರಾಜ್ಯದ ಉಪಮುಖ್ಯಮಂತ್ರಿಗಳಾದ ಡಾ. ಜಿ. ಪರಮೇಶ್ವರ ಅವರು "ಕೃಷಿ ಮತ್ತು ಶಿಕ್ಷಣ ಕ್ಷೇತ್ರಕ್ಕೆ ಶ್ರೀಮಠದ ಕೊಡುಗೆ ಅಪಾರ" ಎಂದು ನುಡಿದರು.

"ಶಾಂತಿ-ನೆಮ್ಮದಿಗಳು ಸಂತೆಯಲ್ಲಿ ಸಿಗುವ ಸರಕಲ್ಲ" ಎಂದು ಆನಂದಪುರಂನ ಶ್ರೀ ಮುರುಘಾಮಠದ ಡಾ. ಶ್ರೀ ಮಲ್ಲಿಕಾರ್ಜುನ ಮುರುಘರಾಜೇಂದ್ರ ಮಹಾಸ್ವಾಮಿಗಳವರು ನುಡಿದರು.

ಜಡೆ ಶ್ರೀ ಸಂಸ್ಥಾನಮಠದ ಪೀಠಾಧ್ಯಕ್ಷರಾದ ಯೋಗಾಚಾರ್ಯ ನಿ.ಪ್ರ.ಸ್ವ. ಡಾ. ಶ್ರೀ ಮಹಾಂತ ಸ್ವಾಮಿಗಳವರು 'ದೇಹವೆಂಬ ರಥದಲ್ಲಿ ಆತ್ಮವೆಂಬ ಚೈತನ್ಯ ವಸ್ತುವನ್ನು ನಾವೆಲ್ಲ ಸ್ಥಾಪಿಸಿಕೊಂಡಿದ್ದೇವೆ" ಎಂದರು.

ಸಮಾರಂಭದಲ್ಲಿ ಗಾವಡೆಗೆರೆಯ ಶ್ರೀಗುರು ಲಿಂಗ ಜಂಗಮ ಮಠದ ಶ್ರೀ ನಟರಾಜ ಸ್ವಾಮಿಗಳವರು ಭಜನಾ ಮೇಳದಲ್ಲಿ ವಿಜೇತರಾದ ಸ್ಪರ್ಧಿಗಳಿಗೆ ಬಹುಮಾನಗಳನ್ನು ವಿತರಿಸಿದರು.

ಶಾಸಕರು ಹಾಗೂ ಮಾಜಿ ಸಚಿವರಾದ ಶ್ರೀ ಎಚ್. ವಿಶ್ವನಾಥ್, ಶಾಸಕರಾದ ಶ್ರೀ ದತ್ತಾತ್ರೇಯ ಸಿ. ಪಾಟೀಲ್ ರೇವೂರ, ಶಾಸಕರಾದ ಶ್ರೀ ಆರ್. ನರೇಂದ್ರ, ಶಾಸಕರಾದ ಶ್ರೀ ಎಂ.ವೈ. ಪಾಟೀಲ್, ಮೈಸೂರು ಮಹಾನಗರಪಾಲಿಕೆಯ ಮಹಾಪೌರರಾದ ಶ್ರೀಮತಿ ಪುಷ್ಪಲತಾ ಜಗನ್ನಾಥ್ ಮೊದಲಾದವರು ಉಪಸ್ಥಿತರಿದ್ದರು.

39ನೇ ರಾಷ್ಟ್ರಮಟ್ಟದ ಕುಸ್ತಿ ಪಂದ್ಯಾವಳಿಯಲ್ಲಿ 50ಕ್ಕೂ ಹೆಚ್ಚು ಕುಸ್ತಿಪಟುಗಳು ಭಾಗವಹಿಸಿದ್ದರು.

ಮೈಸೂರಿನ ಪೈಲ್ವಾನ್ ಚಂದನ್ ಮತ್ತು ಉದ್ದೂರಿನ ಪೈಲ್ವಾನ್ ಭರತ್‌ರ ನಡುವೆ ನಡೆದ ಸೆಣಸಾಟದಲ್ಲಿ ಭರತ್ ಮೇಲುಗೈ ಸಾಧಿಸುವ ಮೂಲಕ ಈ ಬಾರಿಯ 'ಸುತ್ತೂರು ಕುಮಾರ' ಪ್ರಶಸ್ತಿಗೆ ಭಾಜನರಾದರು.

ಸಮಾರಂಭದಲ್ಲಿ ಶಾಸಕರು ಹಾಗೂ ಮಾಜಿ ಸಚಿವರಾದ ಶ್ರೀ ತನ್ವೀರ್ ಸೇಠ್, ವಿಧಾನ ಪರಿಷತ್ ಸದಸ್ಯರಾದ ಶ್ರೀ ಕೆ.ಟಿ. ಶ್ರೀ ಕಂಠೇಗೌಡ, ಶಾಸಕರಾದ ಶ್ರೀ ಮರಿತಿಬ್ಬೇಗೌಡ ಮೊದಲಾದವರು ಉಪಸ್ಥಿತರಿದ್ದರು.

**ದಿನಾಂಕ 6.2.2019 ರಂದು ಸಾಂಸ್ಕೃತಿಕ ಮೇಳ ಹಾಗೂ ದನಗಳ ಜಾತ್ರೆ ಸಮಾರೋಪ** ಸಮಾರಂಭದ ಸಮ್ಮುಖ ವಹಿಸಿದ್ದ ಮೈಸೂರಿನ ಶ್ರೀ ರಾಮಕೃಷ್ಣಮಠದ ಅಧ್ಯಕ್ಷರಾದ ಶ್ರೀ ಸ್ವಾಮಿ ಆತ್ಮಜ್ಞಾನಂದ ಮಹರಾಜ್‌ರವರು ತಮ್ಮ ಶುಭ ಸಂದೇಶದಲ್ಲಿ "ಆಲಸ್ಯ ಬಿಟ್ಟು ಪ್ರತಿಯೊಬ್ಬರೂ ನಿಷ್ಠೆಯಿಂದ ದುಡಿಯುವಂತಾದಾಗ ಮಾತ್ರ ವೈಯುಕ್ತಿಕ ಮತ್ತು ದೇಶದ ಅಭಿವೃದ್ಧಿ ಸಾಧ್ಯ" ಎಂದು ನುಡಿದರು.

ಅಧ್ಯಕ್ಷತೆ ವಹಿಸಿದ್ದ ಶಾಸಕರು ಹಾಗೂ ಮಾಜಿ ಸಚಿವರಾದ ಶ್ರೀ ವಿ. ಸೋಮಣ್ಣ ಅವರು ಶ್ರೀಮಠದ ದೂರದರ್ಶಿತ್ವವನ್ನು ಪ್ರತಿಯೊಂದು ಕ್ಷೇತ್ರದಲ್ಲಿಯೂ ಕಾಣಬಹುದೆಂದು ನುಡಿದರು.

ಸಮಾರಂಭದಲ್ಲಿ ಸಾಂಸ್ಕೃತಿಕ ಮೇಳ ಹಾಗೂ ದನಗಳ ಜಾತ್ರೆಯಲ್ಲಿ ವಿಜೇತರಾದವರಿಗೆ ಬಹುಮಾನಗಳನ್ನು ವಿತರಿಸಲಾಯಿತು.

ಕೃಷಿ ಮೇಳ ಮತ್ತು ವಸ್ತುಪ್ರದರ್ಶನ ಸಮಾರೋಪ ಸಮಾರಂಭವು ಗದಗ-ಡಂಬಳದ ಜಗದ್ಗುರು ಡಾ. ತೋಂಟದ ಸಿದ್ಧರಾಮಮಹಾಸ್ವಾಮಿಗಳವರ ಸಮ್ಮುಖದಲ್ಲಿ ನೆರವೇರಿತು. ಸಮಾರಂಭದಲ್ಲಿ ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯ ನಿರ್ವಾಹಕ ಕಾರ್ಯದರ್ಶಿಗಳಾದ ಶ್ರೀ ಸಿ.ಜಿ. ಬೆಟಸೂರಮಠ, ಡಾ. ಟಿ.ಸಿ. ಪೂರ್ಣಿಮಾ, ಡಾ. ಎಚ್.ಎನ್. ರವೀಂದ್ರ ಮೊದಲಾದವರು ಉಪಸ್ಥಿತರಿದ್ದರು.



## ಸರಸ್ವತಿಪುರಂ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ 'ಕನ್ನಡ ಕಂಪು' 'ಜೀವಶ್ರುತಿ' ಧ್ವನಿಸುರುಳಿ ಬಿಡುಗಡೆ

ಮೈಸೂರಿನ ಸರಸ್ವತಿಪುರಂನಲ್ಲಿನ ಜೆಎಸ್‌ಎಸ್ ಮಹಿಳಾ ಪದವಿ ಕಾಲೇಜಿನಲ್ಲಿ 'ಕನ್ನಡ ಕಂಪು-2019' ಮತ್ತು 'ಜೀವಶ್ರುತಿ' ಧ್ವನಿಸುರುಳಿ ಬಿಡುಗಡೆ ಸಮಾರಂಭ ನೆರವೇರಿತು.

ನಿವೃತ್ತ ಪ್ರಾಂಶುಪಾಲರೂ ಜಾನಪದ ತಜ್ಞರೂ ಆದ ಡಾ. ಶಂಭು ವಿ. ಬಳಿಗಾರರವರು ಜ್ಯೋತಿ ಬೆಳಗಿಸುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿ "ಕಾಲೇಜಿನಲ್ಲಿ ನಡೆಯುತ್ತಿರುವ 'ಕನ್ನಡ ಕಂಪು' ಕಾರ್ಯಕ್ರಮ ಬಹಳ ಸೊಗಸಾಗಿ ಮೂಡಿಬರುತ್ತಿದೆ. ಇಂತಹ ಕಾರ್ಯಕ್ರಮಗಳು ನಮ್ಮನ್ನು ಮತ್ತೆ ಮತ್ತೆ ಕನ್ನಡದ ದರ್ಶನ ಹಾಗೂ ನಾಡು ನುಡಿಯನ್ನು ಗೌರವಿಸುವ ಸಂದರ್ಭವನ್ನು ಒದಗಿಸುತ್ತವೆ. ಕನ್ನಡ ಭಾಷೆಯನ್ನು ನಾವು ಸಾಹಿತ್ಯದಲ್ಲಿ ಮಾತ್ರವಲ್ಲದೆ, ಮಾನವೀಯ ಬದುಕಿನಲ್ಲೂ ಕಾಣಲು ಪ್ರಯತ್ನಿಸಬೇಕು. ಮಾನವನಿಗೆ ಸಂಸ್ಕೃತಿ ಮತ್ತು ಸಂಸ್ಕಾರ ಬಹಳ ಮುಖ್ಯ. ಮನುಷ್ಯ ಸಂಸ್ಕೃತಿಯಿಂದ ಬಹಳ ದೊಡ್ಡವನಾಗುತ್ತಾನೆ. ನಮ್ಮ ನೆಲದ ಸಂಸ್ಕೃತಿಯ ರಕ್ಷಣೆಯ ಹೊಣೆ ನಮ್ಮ ಆದ್ಯ ಕರ್ತವ್ಯವಾಗಿದೆ. ಆಧುನಿಕ ಭರಾಟೆಯಲ್ಲಿ ಇಂದು ನಮ್ಮ ಸಂಸ್ಕೃತಿಯು ಮರೆಯಾಗುತ್ತಿದೆ. ನಾವು ಪಾಶ್ಚಿಮಾತ್ಯ ಸಂಸ್ಕೃತಿಯ ಕಡೆಗೆ ಮಾರುಹೋಗುತ್ತಿದ್ದೇವೆ. ನೆಲ-ಸಂಸ್ಕೃತಿಯ ಸಂಬಂಧಗಳು ಬೆಸೆದುಕೊಳ್ಳುವ ಬದಲು ಛಿದ್ರವಾಗುತ್ತಿವೆ. ಮಕ್ಕಳು ಹಿರಿಯರನ್ನು ಗೌರವಿಸುವ ಬದಲು ಹೆತ್ತ ತಂದೆ-ತಾಯಿಗಳನ್ನು ವೃದ್ಧಾಶ್ರಮಗಳಿಗೆ ಬಿಡುತ್ತಿರುವುದು ನೋವಿನ ಸಂಗತಿ. ಇಂದು ಮಾನವೀಯ ಮೌಲ್ಯಗಳು ಅಳಿವಿನ ಅಂಚಿನಲ್ಲಿದ್ದು, ವಿಕೃತಿ ಸಂಸ್ಕೃತಿಯು ಎಲ್ಲೆಡೆ ಹರಡುತ್ತಿದೆ" ಎಂದರು.

"ಮರಕ್ಕೆ ಸಂಸ್ಕಾರ ಕೊಟ್ಟಾಗ ಅದು ಹಾಳೆಯಾಗುತ್ತದೆ. ಯಾವ ವಸ್ತುವನ್ನು ನೀವು ತುಳಿದಿರುವಿರೋ ಅದೇ ವಸ್ತುವಿಗೆ ಸಂಸ್ಕಾರ ನೀಡಿದಾಗ ನಮಸ್ಕರಿಸುವಷ್ಟು ಎತ್ತರಕ್ಕೆ ಬೆಳೆಯುತ್ತದೆ. ನಮ್ಮ ಸಮಾಜದಲ್ಲಿ ನಮ್ಮ ವ್ಯಕ್ತಿತ್ವವನ್ನು ಹಾಳುಗೆಡುವ ಹಲವು ವಿಚಾರಗಳಿರುತ್ತವೆ. ಆದರೆ ಆದರಿಂದ ದೂರವಿರಬೇಕು. ಕಬ್ಬಿನ ರಸ ಅಥವಾ ಹಣ್ಣಿನ ರಸವನ್ನು ಕುಡಿಯುವುದು ಸಂಸ್ಕೃತಿ. ಆದರೆ ಅದನ್ನು ಹೆಂಡ ಮಾಡಿ ಕುಡಿಯುವುದು ವಿಕೃತಿ. ಇದರಿಂದ ಸಮಯ, ಆರೋಗ್ಯ ಹಾಳು. ಸಂಸ್ಕಾರ ಎಂಬುದು ನಮ್ಮ ನಡೆ-ನುಡಿಗಳಲ್ಲಿದೆ, ನಿತ್ಯದ ಬದುಕಿನಲ್ಲಿದೆ. ಕನ್ನಡಿಗರಾದ ನಾವು ಸೃಜನಶೀಲತೆಯನ್ನು ಕಾಪಾಡಿಕೊಂಡು ಬರಬೇಕು. ಕನ್ನಡ ನಾಡು, ನುಡಿ, ಸಾಹಿತ್ಯ ಸಂಸ್ಕೃತಿಯನ್ನು ಉಳಿಸಿ, ಬೆಳೆಸಬೇಕಾದ ಕರ್ತವ್ಯ ನಮ್ಮ ಮೇಲಿದೆ. ಕನ್ನಡ ತಾಯಿಯ ಮಹಾಪೋಷಣೆಯ ಅಗತ್ಯವಿದೆ. ಇದರ ಬಗ್ಗೆ ಚಿಂತನೆ ನಡೆಸಬೇಕು ಮತ್ತು ಕನ್ನಡ ಭಾಷೆಯ ಮೂಲಕ ಇಡೀ ವಿಶ್ವವನ್ನು ಗಟ್ಟಿಗೊಳಿಸುವ ಪ್ರಯತ್ನ ಆಗಬೇಕು" ಎಂದು ತಿಳಿಸಿದರು.

ಶ್ರೀ ಕೆ. ಸುಚೇಂದ್ರ ಪ್ರಸಾದ್‌ರವರು ಡಾ. ಎಸ್.ಪಿ. ಉಮಾದೇವಿ ಅವರ ಭಾವಗೀತಗುಚ್ಛ 'ಜೀವಶ್ರುತಿ' ಧ್ವನಿಸುರುಳಿ ಬಿಡುಗಡೆ ಮಾಡಿ ಮಾತನಾಡುತ್ತಾ "ಹಿರಿಯರ ಮಾತು ಚೆಂದ, ಕನ್ನಡದ ಕಂಪು ಇನ್ನೂ ಚೆಂದ. ಡಾ. ಉಮಾದೇವಿಯವರು ಈ ಧ್ವನಿಸುರುಳಿಯ ಮೂಲಕ ನಾಡು-ನುಡಿ ಬಿಂಬಿಸುವ, ಜನರಿಗೆ ಹತ್ತಿರವಾಗುವ ಹಾಗೂ ಕನ್ನಡತನವು ಬರಿ ಮಾತಿನ ಸ್ವತ್ತಾಗದೆ, ಕೃತಿಗಳ ಮೂಲಕ ನಾಡಿನೆಲ್ಲೆಡೆ ಪಸರಿಸುವ ಕೆಲಸವನ್ನು ಮಾಡಿದ್ದಾರೆ. ಸಾಹಿತ್ಯರಂಗದಲ್ಲಿ ಅವರ ಕಾವ್ಯಕೃಷಿ, ರಾಷ್ಟ್ರಭಕ್ತಿ, ನಂಬಿದ ದೈವದ ಸಂಸ್ಮರಣೆ ಉತ್ತಮವಾಗಿದೆ. ಸಾಹಿತ್ಯ ಕ್ಷೇತ್ರದಲ್ಲಿ ಅವರು ಮಾಡುತ್ತಿರುವ ಸೇವೆ ಶ್ಲಾಘನೀಯವಾದದ್ದು. ಈ ನೆಲದ ಭಾಷೆಯನ್ನು ಮನೆಮನಗಳಲ್ಲಿ ಬೆಸೆಯಬೇಕು ಮತ್ತು ಮುಂದಿನ ತಲೆಮಾರುಗಳಿಗೆ ಪಸರಿಸುವ ಕೆಲಸವಾಗಬೇಕಿದೆ. ಭಾಷೆ ಎಂಬುದು ಒಂದು ವ್ಯಕ್ತಿತ್ವ, ಒಂದು

ಪರಂಪರೆ. ಹಳೆಬೇರು ಹೊಸ ಚಿಗುರು ಎಂಬಂತೆ ನಮ್ಮ ಪರಂಪರೆ, ಸಂಸ್ಕೃತಿಯನ್ನು ಉಳಿಸಿಕೊಳ್ಳಬೇಕು. ಕನ್ನಡದ ಇಂಪು-ಕಂಪನ್ನು ಕಟ್ಟುವ ಕೆಲಸ ನಮ್ಮದಾಗಬೇಕು. ಇದು ಬರಿ ಮಾತಾಗಬಾರದು. ಕನ್ನಡ ತಾಯಿಯ ಮಹಾಪೋಷಣೆಯ ಅಗತ್ಯವಿದೆ. ಕನ್ನಡ ಭಾಷಾ ಶಿಕ್ಷಣಕ್ಕೆ ಒತ್ತು ನೀಡಬೇಕು. ಸಾಹಿತ್ಯ ಯಾವಾಗ ಜನಸಾಮಾನ್ಯರನ್ನು ತಲುಪುತ್ತದೆಯೋ ಆಗ ಸಾಹಿತ್ಯ ಕ್ಷೇತ್ರ ಬೆಳೆಯುತ್ತದೆ" ಎಂದು ಹೇಳಿದರು.

ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿಗಳಾದ ಡಾ. ಸಿ.ಜಿ. ಬೆಟಸೂರಮಠರವರು ಮಾತನಾಡಿ "ಕನ್ನಡ ಸಾಹಿತ್ಯಕ್ಕೆ ತನ್ನದೇ ಆದ ಪರಂಪರೆಯ ಇತಿಹಾಸವಿದೆ. ಇಂತಹ ಕನ್ನಡ ನಾಡಿನಲ್ಲಿ ಹುಟ್ಟಿರುವ ನಾವೇ ಧನ್ಯರು. ಕನ್ನಡಿಗರಾದ ನಾವು ಸೃಜನಶೀಲತೆಯನ್ನು ಕಾಪಾಡಿಕೊಂಡು ಬರಬೇಕು. ಆದರೆ ಇಂದು ಯಾವುದೋ ಒಂದು ಕೀಳರಿಮೆ ನಮ್ಮನ್ನು ಕಾಡಿ, ಮಂಕುಗೊಳಿಸಿ ನಾವು ಆಂಗ್ಲ ಭಾಷೆಗೆ ಮಾರುಹೋಗುತ್ತಿದ್ದೇವೆ. ಇಂದು ನಾವು ಮಾತನಾಡುತ್ತಿರುವುದು ಕನ್ನಡವೇ ಅಲ್ಲ. ಅಚ್ಚಕನ್ನಡ ಎಲ್ಲಿದೆ? ಏನಾಗಿದೆ? ಇಂದು ನಾವು ಹುಡುಕಬೇಕಾಗಿದೆ. ಇವುಗಳನ್ನೆಲ್ಲಾ ತಿಳಿದು, ಎಚ್ಚೆತ್ತುಕೊಂಡು, ಕನ್ನಡ ನಾಡು, ನುಡಿ, ಸಾಹಿತ್ಯ, ಸಂಸ್ಕೃತಿಯನ್ನು ಉಳಿಸಿ, ಬೆಳೆಸಬೇಕಾದ ಕರ್ತವ್ಯ ನಮ್ಮ ಮೇಲಿದೆ. ಕನ್ನಡಿಗರು ವಿಚಾರವಂತರಾಗಬೇಕು, ಕ್ರಿಯಾಶೀಲರಾಗಬೇಕು, ಮಾತೃಭಾಷೆ ಶಿಕ್ಷಣಕ್ಕೆ ಒತ್ತು ನೀಡಬೇಕು. ಇವೆಲ್ಲವನ್ನು ಕಾರ್ಯಗತಗೊಳಿಸಿದಲ್ಲಿ ಕನ್ನಡ ಭಾಷೆ ಉಳಿಯಲು ಸಾಧ್ಯ" ಎಂದು ಅಭಿಪ್ರಾಯಪಟ್ಟರು.

ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾಲೇಜು ವಿಭಾಗದ ನಿರ್ದೇಶಕರಾದ ಪ್ರೊ. ವೊರಬದ ಮಲ್ಲಿಕಾರ್ಜುನರವರು, ಪ್ರಾಚಾರ್ಯರಾದ ಡಾ. ಕೆ.ವಿ. ಸುರೇಶ, ಶೈಕ್ಷಣಿಕ ಡೀನ್ ಡಾ. ಎಚ್.ಬಿ. ಸುರೇಶ್, ಕನ್ನಡ ವಿಭಾಗದ ಮುಖ್ಯಸ್ಥರಾದ ಶ್ರೀಮತಿ ಎಸ್.ಪಿ. ಉಮಾದೇವಿ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ದತ್ತಿಪುರಸ್ಕಾರದ ನಿರ್ವಹಣೆಯನ್ನು ಮುಖ್ಯ ಗ್ರಂಥಪಾಲಕರಾದ ಶ್ರೀ ಮಂಜುನಾಥ್ ನಿರ್ವಹಿಸಿದರು. ಕಾವಾ ವಿದ್ಯಾರ್ಥಿ ಶ್ರೀ ಗುರುಹಿರೇಮಠ್‌ರವರು ಪೂಜ್ಯಶ್ರೀ ರಾಜೇಂದ್ರ ಮಹಾಸ್ವಾಮಿಗಳವರ ಭಾವಚಿತ್ರವನ್ನು ರಚಿಸಿದರು. ಶ್ರೀ ಹೊನ್ನಶೆಟ್ಟಿ ಸ್ವಾಗತಿಸಿದರು. ಕಾಲೇಜಿನ ಅಕ್ಯಾಡೆಮಿಕ್ ಡೀನ್ ಡಾ. ಎಚ್.ಬಿ. ಸುರೇಶ್ ವಂದಿಸಿದರು. ಶ್ರೀ ಆರ್.ಎಸ್. ಕುಮಾರ್ ನಿರೂಪಿಸಿದರು. ಸಮಾರಂಭದಲ್ಲಿ ಶ್ರೀ ಶಂಕರ ದೇವನೂರು, ಕಾಲೇಜಿನ ನಿವೃತ್ತ ಪ್ರಾಂಶುಪಾಲರುಗಳು, ಅಧ್ಯಾಪಕರುಗಳು, ಉಪನ್ಯಾಸಕರುಗಳು, ಸಾಹಿತ್ಯಾಭಿಮಾನಿಗಳು, ಕಾಲೇಜಿನ ಸಿಬ್ಬಂದಿವರ್ಗ ಹಾಗೂ ವಿದ್ಯಾರ್ಥಿಗಳು ಹಾಜರಿದ್ದರು.

ಅಪರಾಹ್ನ ವಿದ್ಯಾರ್ಥಿನಿಯರಿಂದ ಸಾಂಸ್ಕೃತಿಕ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ವಿದ್ಯಾರ್ಥಿನಿಯರು ವಿವಿಧ ಮನೋರಂಜನಾ ಕಾರ್ಯಕ್ರಮವನ್ನು ನಡೆಸಿಕೊಟ್ಟರು. ಬಿಗ್‌ಬಾಸ್ ಖ್ಯಾತಿಯ ಶ್ರೀ ನವೀನ್‌ಸಜ್ಜುರವರು ಹಾಜರಿದ್ದು ಮನೋರಂಜನಾ ಕಾರ್ಯಕ್ರಮವನ್ನು ನಡೆಸಿಕೊಟ್ಟರು.

**ಜೆಎಸ್‌ಎಸ್ ಸಂಸ್ಥೆಗಳಲ್ಲಿ ನಡೆಯುವ**
**ಕಾರ್ಯಕ್ರಮದ ವರದಿಗಳು**
**ಮತ್ತು ಛಾಯಾಚಿತ್ರಗಳನ್ನು**
**ಜೆಎಸ್‌ಎಸ್ ಮಾಸಪತ್ರಿಕೆಯ**
**ಈ ಕೆಳಕಂಡ ಇಮೇಲ್‌ಗೆ ಕಳುಹಿಸುವುದು.**
**email:jssmasapatrike@gmail.com**

## 70ನೆಯ ಗಣರಾಜ್ಯೋತ್ಸವ

ದಿನಾಂಕ 26.01.2019ರಂದು 70ನೇ **ಗಣರಾಜ್ಯೋತ್ಸವವನ್ನು ನಂಜನಗೂಡಿನ ಜೆಎಸ್‌ಎಸ್ ಕಾಲೇಜಿನಲ್ಲಿ ಆಚರಿಸಲಾಯಿತು.** ನಿವೃತ್ತ ಪ್ರಾಂಶುಪಾಲರಾದ ಶ್ರೀ ಎನ್.ವಿ. ಶಿವಲಿಂಗಪ್ಪನವರು ಧ್ವಜಾರೋಹಣ ನೆರವೇರಿಸಿ ಮಾತನಾಡುತ್ತಾ "ಸಂವಿಧಾನ ಭಾರತೀಯರಿಗೆ ಧರ್ಮಗ್ರಂಥವಿದ್ದಂತೆ. ಸಂವಿಧಾನದ ಮೂಲ ಉದ್ದೇಶ ಪ್ರತಿಯೊಬ್ಬರಿಗೂ ಭದ್ರತೆಯನ್ನು ಒದಗಿಸುವುದು. ಹಕ್ಕು ಮತ್ತು ಕರ್ತವ್ಯವನ್ನು ಅರಿತು ಪಾಲಿಸಬೇಕು. ಭ್ರಾತೃತ್ವ, ಸಮಾನತೆ ಇದರ ಮೂಲಮಂತ್ರವಾಗಿದೆ. ಈ ಸಂವಿಧಾನ ರಚನೆಯಲ್ಲಿ ಡಾ. ಬಿ.ಆರ್. ಅಂಬೇಡ್ಕರ್‌ರವರ ಪಾತ್ರ ಹಿರಿದು" ಎಂದು ಅಭಿಪ್ರಾಯಪಟ್ಟರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಪದವಿ ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಎಚ್.ಎಸ್. ನಾಗೇಂದ್ರಕುಮಾರ್‌ರವರು ಮಾತನಾಡುತ್ತಾ "ಭಾರತ ಗಣತಂತ್ರವಾಗಿ ಇನ್ನೂ ಉಳಿದಿರುವುದು ಸೈನ್ಯದ ಕಾರಣದಿಂದ. ಭಾರತಕ್ಕೆ ಸೈನಿಕರ ಸೇವೆ ಅತ್ಯಂತ ಮಹತ್ವದ್ದು. ಸಂವಿಧಾನವನ್ನು ಒಂದು ಪಠ್ಯ ವಿಷಯವನ್ನಾಗಿ ಅಧ್ಯಯನ ಮಾಡುತ್ತಿದ್ದರೂ ಅದರ ಸಮರ್ಥ ಅರಿವು ನಮ್ಮ ವಿದ್ಯಾರ್ಥಿಗಳಿಗೆ ಆಗುತ್ತಿಲ್ಲ. ಕರ್ತವ್ಯದ ಅರಿವಿಲ್ಲದೆ ಹಕ್ಕನ್ನು ಕೇಳುವ ಯೋಗ್ಯತೆ ನಮಗಿರುವುದಿಲ್ಲ" ಎಂದು ಅಭಿಪ್ರಾಯ ಪಟ್ಟರು.

ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಸಿ.ವಿ. ಬಸವರಾಜು, ದೈಹಿಕ ಶಿಕ್ಷಣ ನಿರ್ದೇಶಕರಾದ ಪ್ರೊ. ಪಳನಿಸ್ವಾಮಿ ಉಪಸ್ಥಿತರಿದ್ದರು. ಅಧ್ಯಾಪಕ, ಅಧ್ಯಾಪಕೇತರ ವರ್ಗ, ಎನ್.ಸಿ.ಸಿ. ಕೆಡೆಟ್‌ಗಳು, ವಿದ್ಯಾರ್ಥಿಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಶ್ರೀಮತಿ ರಕ್ಷಿತ ಕಾರ್ಯಕ್ರಮ ನಿರೂಪಿಸಿದರು. ಶ್ರೀಮತಿ ರೂಪ ಸ್ವಾಗತಿಸಿದರು. ಶ್ರೀ ಕೆ.ಎನ್. ಶಿವಕುಮಾರ್ ವಂದಿಸಿದರು.

### ಪ್ರಜಾಪ್ರಭುತ್ವದ ಅಳಿವು - ಉಳಿವು ಜನ ಸಾಮಾನ್ಯರ ಕೈಯಲ್ಲಿದೆ - ಶ್ರೀ ಮಹೇಶ್ ಪ್ರಭು

"ಇಡೀ ವಿಶ್ವಕ್ಕೆ ಮಾದರಿಯಾದ ಭಾರತದ ಸಂವಿಧಾನವನ್ನು ಗೌರವಿಸುವುದು, ರಕ್ಷಿಸುವುದು ಪ್ರತಿಯೊಬ್ಬರ ಜವಾಬ್ದಾರಿ. ದೇಶದ ಬಲಿಷ್ಠ ಪ್ರಜಾಪ್ರಭುತ್ವ ಕ್ಷೀಣಿಸುತ್ತಿರುವುದು ದುರ್ದೈವ. ಇದರ ಅಳಿವು-ಉಳಿವು ಜನಸಾಮಾನ್ಯರಾದ ನಮ್ಮ ಕೈಯಲ್ಲಿಯೇ ಇರುವುದು" ಎಂದು ಚಾಮರಾಜನಗರ ಜಿಲ್ಲಾರೈತಸಂಘದ ಮಾಜಿ ಅಧ್ಯಕ್ಷರಾದ ಶ್ರೀ ಮಹೇಶ್‌ಪ್ರಭು ಅಭಿಪ್ರಾಯಪಟ್ಟರು.

ಕೊಳ್ಳೇಗಾಲದ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಆಯೋಜಿಸಿದ್ದ 70ನೆಯ ಗಣರಾಜ್ಯೋತ್ಸವ ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಆಗಮಿಸಿ ಅವರು ಮಾತನಾಡಿದರು "ದೇಶದಲ್ಲಿ ಬಡತನ, ಅಸಮಾನತೆ, ಅನಕ್ಷರತೆ, ನಿರುದ್ಯೋಗ, ಕೋಮುವಾದ, ಮಹಿಳೆಯರ ಅಸುರಕ್ಷತೆಗಳನ್ನು ನಿರ್ಮೂಲನೆ ಮಾಡಲಾಗಿಲ್ಲ. ಜನಸಾಮಾನ್ಯರು, ವಿದ್ಯಾವಂತ ಯುವ ಸಮೂಹವು ಐದು ವರ್ಷಕ್ಕೊಮ್ಮೆ ಲಭಿಸುವ ಪ್ರಬಲ ಅಸ್ತ್ರವಾದ ಮತದಾನವನ್ನು ಸರಿಯಾಗಿ ಬಳಸಿ ಸಂವಿಧಾನ ವ್ಯವಸ್ಥೆಯನ್ನು ತಮಗೆ ಇಷ್ಟ ಬಂದ ರೀತಿಯಲ್ಲಿ ತಿರುಚುವಂತಹ ವ್ಯವಸ್ಥೆಗೆ ಅಂತ್ಯ ಹಾಡಬೇಕಿದೆ. ಪ್ರತೀ ವರ್ಷದ ಗಣರಾಜ್ಯೋತ್ಸವ ವೈಭವದ ಆಚರಣೆಗಷ್ಟೇ

ಸೀಮಿತವಾಗದೆ ಆದರ ಮುಖ್ಯ ಆಶಯಗಳು ಸಫಲಗೊಳ್ಳುವಂತಾಗಬೇಕು" ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಪ್ರಾಂಶುಪಾಲ ಪ್ರೊ. ಉಮೇಶ "ಲಕ್ಷಾಂತರ ಭಾರತೀಯರ ಹೋರಾಟದ ಫಲವಾಗಿ ಭಾರತ ಸ್ವಾತಂತ್ರ್ಯ ಗಳಿಸಿ 72ವರ್ಷಗಳು ತುಂಬಿವೆ. ನಮ್ಮ ಜನತಾಂತ್ರಿಕ ವ್ಯವಸ್ಥೆ ಪ್ರಬುದ್ಧವಾಗಿ ಕಂಡರೂ ಅದರ ವ್ಯವಸ್ಥೆಯ ನಿರ್ವಹಣೆ ನಿರೀಕ್ಷಿತ ಮಟ್ಟದಲ್ಲಿಲ್ಲ. ಸಂವಿಧಾನದ ರೂವಾರಿ ಡಾ. ಅಂಬೇಡ್ಕರ್ ಅವರ ಚಿಂತನೆಗಳು ಯುವ ಪೀಳಿಗೆಯಲ್ಲಿ ನವಚೈತನ್ಯವನ್ನು ತುಂಬಿ ಭಾರತ, ಇಡೀ ವಿಶ್ವದಲ್ಲೇ ಒಂದು ಮಾದರಿ ದೇಶವಾಗಬೇಕಿದೆ. ಪದೇ ಪದೇ ಚುನಾವಣೆಯಾಗುವುದನ್ನು ನಿಲ್ಲಿಸಿ 'ಒಂದು ದೇಶ ಒಂದು ಚುನಾವಣೆ' ಎಂಬ ನೀತಿಯನ್ನು ಅಳವಡಿಸಿಕೊಂಡು ಅಭಿವೃದ್ಧಿ ಚಟುವಟಿಕೆಗಳಲ್ಲಿ ಸರಕಾರಗಳು ತೊಡಗಿಸಿಕೊಂಡಿದ್ದೇ ಆದರೆ ದೇಶ ಪ್ರಗತಿಯ ಹಾದಿಯಲ್ಲಿ ಸಾಗಬಹುದಾಗಿದೆ" ಎಂದು ತಿಳಿಸಿದರು.

ನರ್ಸಿಂಗ್ ಶಾಲೆಯ ಪ್ರಾಂಶುಪಾಲ ಶ್ರೀ ಡಿ.ಜಿ. ವಿಷಕಂಠಮೂರ್ತಿ, ಶ್ರೀ ಎಂ. ಲಿಂಗಣ್ಣ, ರಾಷ್ಟ್ರೀಯ ಹಬ್ಬಗಳ ಆಚರಣೆ ಸಮಿತಿ ಸಂಚಾಲಕ ಪ್ರೊ. ಗುರುಪ್ರಸಾದ್ ವೇದಿಕೆಯಲ್ಲಿ ಉಪಸ್ಥಿತರಿದ್ದರು.

## ಪ್ರಜಾಪ್ರಭುತ್ವದ ಯಶಸ್ಸು ಜನರ ಕೈಯಲ್ಲಿದೆ

ದಿನಾಂಕ 26.1.2019ರಂದು ಮಂಡ್ಯದ ಜೆಎಸ್‌ಎಸ್ ಪಬ್ಲಿಕ್ ಶಾಲೆಯಲ್ಲಿ ಗಣರಾಜ್ಯೋತ್ಸವ ಆಚರಿಸಲಾಯಿತು.

ಪಾಂಡವಪುರ ಪದವಿ ಪೂರ್ವ ಕಾಲೇಜಿನ ಭೌತಶಾಸ್ತ್ರ ಉಪನ್ಯಾಸಕರಾದ ಶ್ರೀ ಕೃಷ್ಣೇಗೌಡರವರು ಧ್ವಜಾರೋಹಣ ನೆರವೇರಿಸಿ ಮಾತನಾಡಿ "ಪ್ರಜಾಪ್ರಭುತ್ವ ಜನರಿಂದ, ಜನರಿಗಾಗಿ, ಜನರಿಗೋಸ್ಕರ ಆಳಲ್ಪಡುವ ಸರ್ಕಾರ, ಇದರ ಯಶಸ್ಸು ನಮ್ಮ ಕೈಯಲ್ಲಿದೆ" ಎಂದು ಹೇಳಿದರು.

ಶಾಲೆಯ ಪ್ರಾಂಶುಪಾಲರಾದ ಶ್ರೀ ಕುಮಾರಸ್ವಾಮಿ ಅತಿಥಿಗಳನ್ನು ಸ್ವಾಗತಿಸಿದರು. ಮಕ್ಕಳು ರಾಷ್ಟ್ರೀಯ ಭಾವೈಕ್ಯತೆಯನ್ನು ಪ್ರತಿಬಿಂಬಿಸುವ ನೃತ್ಯ ಮತ್ತು ಗಾಯನ ಪ್ರದರ್ಶಿಸಿದರು.

**ಗುಂಡ್ಲುಪೇಟೆಯ ಜೆಎಸ್‌ಎಸ್ ಕಲಾ ಮತ್ತು ವಾಣಿಜ್ಯ ಕಾಲೇಜಿನಲ್ಲಿ** ದಿನಾಂಕ 26.1.2019ರಂದು 70ನೆಯ ಗಣರಾಜ್ಯೋತ್ಸವವನ್ನು ಆಚರಿಸಲಾಯಿತು. ಇತಿಹಾಸ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಶ್ರೀ ಎಂ. ಪ್ರಭುಸ್ವಾಮಿಯವರು ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿ ಧ್ವಜಾರೋಹಣ ಕಾರ್ಯಕ್ರಮವನ್ನು ನೆರವೇರಿಸಿಕೊಟ್ಟರು. "ಗಣರಾಜ್ಯೋತ್ಸವ ದಿನ ಎಂದರೆ ಭಾರತದ ಎಲ್ಲ ಪ್ರಜೆಗಳಿಗೆ ತಮ್ಮನ್ನು ತಾವು ಆಳಿಕೊಳ್ಳಲು ಅಧಿಕಾರವನ್ನು ನೀಡಿದ ದಿನ" ಎಂದು ತಿಳಿಸಿದರು. ಆಂಗ್ಲಭಾಷಾ ವಿಭಾಗದ ಮುಖ್ಯಸ್ಥರಾದ ಶ್ರೀ ಸಿ.ಎಸ್. ಹೊನ್ನೇಗೌಡರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

> ಹಾಳು ಮೊರಡಿಗಳಲ್ಲಿ ಊರ ದಾರಿಗಳಲ್ಲಿ
> ಕೆರೆ ಬಾವಿ ಹೂಗಿಡು ಮರಂಗಳಲ್ಲಿ
> ಗ್ರಾಮಮಧ್ಯಗಳಲ್ಲಿ ಚೌಪಥ ಪಟ್ಟಣಪ್ರವೇಶದಲ್ಲಿ
> ಹಿರಿಯಾಲದ ಮರದಲ್ಲಿ ಮನೆಯ ಮಾಡಿ,
> ಕರೆವೆಮ್ಮೆ, ಹಸುಗೂಸು, ಬಸುರಿ, ಬಾಣತಿ,
> ಕುಮಾರಿ ಕೊಡಗೂಸೆಂಬವರ ಹಿಡಿದುಂಬ ತಿರಿದುಂಬ
> ಮಾರಯ್ಯ ಬೀರಯ್ಯ ಕೇಚರಗಾವಿಲ ಅಂತಃ ಬೆಂತಃ
> ಕಾಳಯ್ಯ ದೂಳಯ್ಯ ಮಾಳಯ್ಯ ಕೇತಯ್ಯಗಳೆಂಬ ನೂರುಮಡಕೆಗೆ
> ನಮ್ಮ ಕೂಡಲಸಂಗಮದೇವ ಶರಣೆಂಬುವುದೊಂದೆ ದಡಿ ಸಾಲದೆ ?
>
> - ಬಸವಣ್ಣ

## ಸಾಂಸ್ಕೃತಿಕ ಮತ್ತು ಕ್ರೀಡಾ ವೇದಿಕೆ ಸಮಾರೋಪ

**ನಂಜನಗೂಡಿನ ಜೆಎಸ್‌ಎಸ್ ಪದವಿಪೂರ್ವ ಕಾಲೇಜಿನಲ್ಲಿ** ದಿನಾಂಕ 24.1.2019ರಂದು ಸಾಂಸ್ಕೃತಿಕ ಮತ್ತು ಕ್ರೀಡಾ ವೇದಿಕೆ ಸಮಾರೋಪ ಹಾಗೂ 'ಸೃಜನ' ವಾರ್ಷಿಕ ಸಂಚಿಕೆ ಬಿಡುಗಡೆ ಕಾರ್ಯಕ್ರಮವವನ್ನು ಹಮ್ಮಿಕೊಳ್ಳಲಾಗಿತ್ತು.

ಮೈಸೂರಿನ ಸೋಮಾನಿ ಶಿಕ್ಷಣ ಸಂಸ್ಥೆಯ ದೈಹಿಕ ಶಿಕ್ಷಣ ನಿರ್ದೇಶಕರಾದ ಶ್ರೀ ಎನ್.ಎಸ್. ಸುಬ್ರಹ್ಮಣ್ಯರವರು ಸಂಚಿಕೆ ಬಿಡುಗಡೆಗೊಳಿಸಿ ಮಾತನಾಡುತ್ತಾ "ವಿದ್ಯಾರ್ಥಿಗಳ ಸುಪ್ತ ಪ್ರತಿಭೆಯನ್ನು ಹೊರತೆಗೆಯಲು, ಓದು ಮತ್ತು ಬರೆಯುವ ಅಭಿರುಚಿಯನ್ನು ಮೂಡಿಸಲು, ಉತ್ತಮ ವೇದಿಕೆಯಾಗಿ 'ಸೃಜನ' ರೂಪುಗೊಂಡಿದೆ" ಎಂದು ಹೇಳಿದರು.

ಗುಂಡ್ಲುಪೇಟೆ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಜಿ. ಮಲ್ಲೇಶ್‌ರವರು ಮಾತನಾಡಿ "ಶಿಕ್ಷಣದಲ್ಲಿ ಪಠ್ಯದ ಜೊತೆ ಜೊತೆಗೆ ಪಠ್ಯೇತರ ಚಟುವಟಿಕೆ ನಡೆಸುವುದು ವಿದ್ಯಾರ್ಥಿಗಳ ಸರ್ವಾಂಗೀಣ ಪ್ರಗತಿಗೆ ಪೂರಕವಾಗಿದೆ" ಎಂದು ತಿಳಿಸಿದರು.

ನಂಜನಗೂಡಿನ ಸರ್ಕಾರಿ ಬಾಲಕಿಯರ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಬಿ. ಮಹದೇವ್‌ರವರು ಅಧ್ಯಕ್ಷತೆ ವಹಿಸಿದ್ದರು. ಪದವಿ ಕಾಲೇಜಿನ ಪ್ರಾಚಾರ್ಯರಾದ ಪ್ರೊ. ನಾಗೇಂದ್ರಕುಮಾರ್ ರವರು ಉಪಸ್ಥಿತರಿದ್ದರು.

ಸಾಂಸ್ಕೃತಿಕ ವೇದಿಕೆ ಸಂಚಾಲಕರಾದ ಶ್ರೀ ಸ್ವಾಮಿ, ದೈಹಿಕ ಶಿಕ್ಷಣ ನಿರ್ದೇಶಕರಾದ ಪ್ರೊ. ಪಳನಿಸ್ವಾಮಿ ಹಾಗೂ 'ಸೃಜನ' ವಾರ್ಷಿಕ ಸಂಚಿಕೆ ಸಂಪಾದಕರಾದ ಶ್ರೀ ಬಿ. ಸುರೇಶ್ ಉಪಸ್ಥಿತರಿದ್ದರು.

ಕಾರ್ಯಕ್ರಮದಲ್ಲಿ ಕಚೇರಿ ಅಧೀಕ್ಷಕರಾದ ಶ್ರೀ ಮಹದೇವಸ್ವಾಮಿ, ಅಧ್ಯಾಪಕ ಅಧ್ಯಾಪಕೇತರ ವರ್ಗದವರು, ವಿದ್ಯಾರ್ಥಿಗಳು ಹಾಜರಿದ್ದರು. ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಸಿ.ವಿ. ಬಸವರಾಜುರವರು ಪ್ರಾಸ್ತಾವಿಕ ನುಡಿಗಳನ್ನಾಡಿದರು. ಕು. ಸುಚಿತ್ರ ಪ್ರಾರ್ಥನೆ ಸಲ್ಲಿಸಿದರು. ಕು. ಮೌನಶ್ರೀ ಸ್ವಾಗತಿಸಿದರು. ಚಿ. ಶ್ರೀಧರ ವಂದಿಸಿದರು. ಕು. ಚಂದನ ಕಾರ್ಯಕ್ರಮ ನಿರೂಪಿಸಿದರು.

□

## ಅರ್ಹವ್ಯಕ್ತಿಗಳಿಗೆ ಮಾತ್ರ ರಾಜಕೀಯ ಪ್ರವೇಶ ನೀಡುವಂತಾಗಬೇಕು - ಡಾ. ಸುಷ್ಮಾ

"ಭಾರತವು ಜಗತ್ತಿನ ಅತಿದೊಡ್ಡ ಹಾಗೂ ಯಶಸ್ವಿ ಪ್ರಜಾಪ್ರಭುತ್ವ ರಾಷ್ಟ್ರ ಎನ್ನುವುದು ಕಟು ಸತ್ಯ. ಆದರೆ ಇಲ್ಲಿನ ರಾಜಕೀಯ ವ್ಯವಸ್ಥೆಯ ವೈಫಲ್ಯವೂ ಅಷ್ಟೇ ಸತ್ಯ. ಪಾಶ್ಚಿಮಾತ್ಯ ದೇಶಗಳಂತೆ ನಮ್ಮಲ್ಲಿ ರಾಜಕೀಯಕ್ಕೆ ಅರ್ಹ ವ್ಯಕ್ತಿಗಳಿಗೆ ಪ್ರವೇಶ ನೀಡಲು ಯಾವುದೇ ಮಾನದಂಡವಿಲ್ಲದಿರುವುದೇ ಇದಕ್ಕೆ ಕಾರಣ" ಎಂದು ಚಾಮರಾಜನಗರದ ಜೆಎಸ್‌ಎಸ್ ಮಹಿಳಾ ಕಾಲೇಜಿನ ಸಹಾಯಕ ಪ್ರಾಧ್ಯಾಪಕಿ ಡಾ. ಸುಷ್ಮರವರು ತಿಳಿಸಿದರು.

ಕೊಳ್ಳೇಗಾಲದ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ದಿನಾಂಕ 25.1.2019ರಂದು ರಾಜ್ಯಶಾಸ್ತ್ರ ವಿಭಾಗ, ರಾಷ್ಟ್ರೀಯ ಸೇವಾ ಯೋಜನೆ ಹಾಗೂ ಯೂತ್ ರೆಡ್ ಕ್ರಾಸ್ ಘಟಕಗಳ ವತಿಯಿಂದ ಆಯೋಜಿಸಿದ್ದ 9ನೆಯ ರಾಷ್ಟ್ರೀಯ ಮತದಾರರ ದಿನಾಚರಣೆ ಉದ್ಘಾಟಿಸಿ ಅವರು ಮಾತನಾಡಿದರು "ಅಭಿವ್ಯಕ್ತಿ ಸ್ವಾತಂತ್ರ್ಯ ಜನಪ್ರತಿನಿಧಿಗಳ ಆಯ್ಕೆಯ ಸ್ವಾತಂತ್ರ್ಯವನ್ನು ಜನತೆಗೆ ನೀಡುವಂತಹ ಉತ್ತಮ ಪ್ರಜಾಪ್ರಭುತ್ವದ ವ್ಯವಸ್ಥೆಯ ಅಡಿಯಲ್ಲಿಯೂ ನಮಗೆ ಆದರ ಯಶಸ್ಸು ಸಿಗುತ್ತಿಲ್ಲ. ಅಸಮರ್ಥ, ಅಪ್ರಾಮಾಣಿಕ ಹಾಗೂ ಕಳಂಕಿತರೇ ಹೆಚ್ಚಿನ ಸಂಖ್ಯೆಯಲ್ಲಿ ರಾಜಕಾರಣಿಗಳಾಗಿ ಆಯ್ಕೆಯಾಗುತ್ತಿರುವುದೇ ಇದಕ್ಕೆ ಕಾರಣ. ಮತದಾರರು ಪ್ರಬುದ್ಧರಾಗಬೇಕಿದೆ. ಪ್ರತಿನಿಧಿಗಳ

ಆಯ್ಕೆ ಸಂದರ್ಭದಲ್ಲಿ ಮತದಾರರು ವಿವೇಚನೆಯಿಂದ ಮತದಾನ ನೀಡುವುದಷ್ಟೇ ಅಲ್ಲದೆ ಮತದಾನ ನಡೆಯುವುದರಲ್ಲಿ ಯುವ ಮತದಾರರ ಪಾತ್ರವಿದೆ" ಎಂದು ಕರೆ ನೀಡಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಪ್ರಾಂಶುಪಾಲ ಪ್ರೊ. ಉಮೇಶ "ಚುನಾವಣೆಯು ಪ್ರಜಾಪ್ರಭುತ್ವದ ಹೃದಯ, ಮೆದುಳು, ಶಕ್ತಿ ಎಲ್ಲವೂ ಆಗಿದೆ. ಆದ್ದರಿಂದ ನಿಮ್ಮ ಅಮೂಲ್ಯವಾದ ಮತವನ್ನು ಸಮಾಜದ ಒಳಿತಿಗೆ ಮೀಸಲಿಡುವ, ಬಹುಜನರ ಅಭಿವೃದ್ಧಿಗೆ ಶ್ರಮಿಸುವ, ದೀನ ದಲಿತರ, ರೈತರ, ಮಹಿಳಾ ಪರವಾದ ನಿಸ್ವಾರ್ಥ ಸೇವೆಯನ್ನು ಬಯಸುವ ಸಮರ್ಥ ಪಕ್ಷಗಳಿಗೆ ನೀಡುವುದು ನಮ್ಮೆಲ್ಲರ ಜವಾಬ್ದಾರಿಯಾಗಬೇಕು. ಮತದಾನದ ಮಹತ್ವವನ್ನು ಅರಿತು ಇತರರಿಗೂ ಅರಿವು ಮೂಡಿಸಿ, ಮತದಾನದ ಮೂಲಕ ಪ್ರಜಾಪ್ರಭುತ್ವದ ಆಶಯಗಳು ಈಡೇರುವಂತೆ ನೋಡಿಕೊಳ್ಳಬೇಕು" ಎಂದು ಕರೆ ನೀಡಿದರು.

ರಾಜ್ಯಶಾಸ್ತ್ರ ಪ್ರಾಧ್ಯಾಪಕರಾದ ಪ್ರೊ. ಕೆ.ಆರ್. ಗುರುಪ್ರಸಾದ್, ಪ್ರೊ. ಸುಮ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಪಟ್ಟಣದ ಪ್ರಮುಖ ಬೀದಿಗಳಲ್ಲಿ ಮತದಾನದ ಮಹತ್ವದ ಬಗ್ಗೆ ಅರಿವು ಮೂಡಿಸಲು ಜಾಥಾವನ್ನು ನಡೆಸಲಾಯಿತು. ಅಂತರ ಕಾಲೇಜು ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ನಗದು ಬಹುಮಾನ ನೀಡಲಾಯಿತು.

## ಸಾಂಸ್ಕೃತಿಕ ಮತ್ತು ಕ್ರೀಡಾ ವೇದಿಕೆಗಳ ಸಮಾರೋಪ

**ಯಳಂದೂರಿನ ಜೆಎಸ್‌ಎಸ್ ಮಹಿಳಾ ಪದವಿಪೂರ್ವ ಕಾಲೇಜಿನಲ್ಲಿ** ದಿನಾಂಕ 28.1.2019 ರಂದು ಸಾಂಸ್ಕೃತಿಕ ಮತ್ತು ಕ್ರೀಡಾ ವೇದಿಕೆಗಳ ಸಮಾರೋಪ ಸಮಾರಂಭ ಹಾಗೂ ಕಿರಿಯರಿಂದ ಹಿರಿಯರಿಗೆ ಬೀಳ್ಕೊಡುಗೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದಲ್ಲಿ ನುಡಿನಮನ ಸಲ್ಲಿಸಲು ಆಗಮಿಸಿದ್ದ ಕೊಳ್ಳೇಗಾಲದ ಜೆಎಸ್‌ಎಸ್ ಮಹಿಳಾ ಪದವಿ ಕಾಲೇಜಿನ ಇತಿಹಾಸ ವಿಭಾಗದ ಮುಖ್ಯಸ್ಥರಾದ ಶ್ರೀ ನಟರಾಜನ್ ರವರು ಮಾತನಾಡುತ್ತಾ "ವಿದ್ಯಾರ್ಥಿಗಳೆಂಬ ತೋಟದಲ್ಲಿ ಜ್ಞಾನ ಎಂಬ ಬೀಜ ಬಿತ್ತಿದ ಮೇರು ಪ್ರತಿಮೆ ನಮ್ಮ ರಾಜೇಂದ್ರ ಶ್ರೀಗಳು" ಎಂದು ಹೇಳಿ ರಾಜೇಂದ್ರ ಮಹಾಸ್ವಾಮಿಗಳು ಮತ್ತು ಸುತ್ತೂರು ಶ್ರೀ ಮಠ ಕುರಿತು ವಿದ್ಯಾರ್ಥಿಗಳಿಗೆ ತಿಳಿಸಿದರು. ಸಮಾರೋಪ ಭಾಷಣಕಾರರಾಗಿ ಆಗಮಿಸಿದ್ದ ಯಳಂದೂರು ಬಿಳಿಗಿರಿ ಪ್ರಥಮ ದರ್ಜೆ ಕಾಲೇಜಿನ ಸಹಾಯಕ ಪ್ರಾಧ್ಯಾಪಕರಾದ ಶ್ರೀ ಪ್ರಕಾಶ್‌ಮೂರ್ತಿಯವರು ಮಾತನಾಡಿ "ವಿದ್ಯಾರ್ಥಿಗಳು ಉತ್ತಮ ಜೀವನ ಮೌಲ್ಯಗಳನ್ನು ಅಳವಡಿಸಿಕೊಳ್ಳಬೇಕು. ಎಲ್ಲಾ ವಿದ್ಯಾರ್ಥಿಗಳು ಸಮಾಜದ ಉತ್ತಮ ಪ್ರಜೆಗಳಾಗಬೇಕು. ತಮ್ಮ ಕಾಲೇಜಿಗೆ ಉತ್ತಮ ಫಲಿತಾಂಶವನ್ನು ನೀಡಬೇಕು. ಒಳ್ಳೆಯ ಜೀವನ ರೂಪಿಸಿಕೊಳ್ಳುವಲ್ಲಿ ಯಶಸ್ವಿಯಾಗಬೇಕು" ಎಂದು ತಿಳಿಸಿದರು. ಕಾರ್ಯಕ್ರಮಕ್ಕೆ ಮುಖ್ಯಅತಿಥಿಯಾಗಿ ಆಗಮಿಸಿದ್ದ ಮೆಳ್ಳಹಳ್ಳಿಯ ಆದರ್ಶ ಶಾಲೆಯ ಮುಖ್ಯಶಿಕ್ಷಕರಾದ ಶ್ರೀ ಗುರುಮೂರ್ತಿಯವರು ಮಾತನಾಡಿ ವಿದ್ಯಾರ್ಥಿಗಳು ತಮ್ಮಿಷ್ಟದ ಕ್ಷೇತ್ರವನ್ನು ಆಯ್ಕೆಮಾಡಿಕೊಂಡು ಮುಂದೆ ಬರಬೇಕು. ಪೋಷಕರ ಒತ್ತಾಯಕ್ಕೆ ಕಟ್ಟುಬಿದ್ದು ಇಷ್ಟವಿಲ್ಲದ ಕ್ಷೇತ್ರ ಆಯ್ದುಕೊಂಡು ಪರಿತಪಿಸಬಾರದು. ಜೊತೆಗೆ ಸತತ ಅಭ್ಯಾಸದಿಂದ ಮಾತ್ರ ಗುರಿ ಮುಟ್ಟಲು ಸಾಧ್ಯ" ಎಂದು ಹೇಳಿದರು. ಮತ್ತೊಬ್ಬ ಅತಿಥಿಗಳಾದ ಕಾಲೇಜಿನ ಹಿರಿಯ ವಿದ್ಯಾರ್ಥಿನಿ ಗುಂಡ್ಲುಪೇಟೆಯ ಮೊರಾರ್ಜಿ ಪದವಿಪೂರ್ವ ಕಾಲೇಜಿನ ಗಣಕವಿಜ್ಞಾನ ವಿಭಾಗದ ಉಪನ್ಯಾಸಕರಾದ ಕು. ಅಮೃತ "ಶಿಕ್ಷಣದಲ್ಲಿ ಶ್ರದ್ಧೆ ಇರಬೇಕು. ಆಗ ಯಾವ ವಿಷಯವೂ ಕಷ್ಟವಲ್ಲ.

ಸಾಧನೆಯ ದಾರಿ ಸುಗಮವಾಗಿ ಕಾಣುತ್ತದೆ" ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತಿನ ಶ್ರೀ ಮಲ್ಲಿಕಾರ್ಜುನಸ್ವಾಮಿ ಮಾತನಾಡಿ "ಹೆಣ್ಣು ಮಕ್ಕಳು ಉತ್ತಮ ಗುಣಮಟ್ಟದ ಶಿಕ್ಷಣ ಪಡೆಯುವ ಮೂಲಕ ಸಾಧನೆಯ ಶಿಖರ ಏರಬೇಕು. ಜೆಎಸ್‌ಎಸ್ ಸಂಸ್ಥೆಯು ತಾಲ್ಲೂಕಿನ ಹೆಣ್ಣು ಮಕ್ಕಳಿಗೆ ಪ್ರತ್ಯೇಕವಾದ ಶಾಲಾ ಕಾಲೇಜನ್ನು ತೆರೆದು ಗ್ರಾಮೀಣ ಭಾಗದ ಹೆಣ್ಣು ಮಕ್ಕಳು ವಿದ್ಯಾವಂತರಾಗಲು ನೆರವಾಗಿದೆ. ಇಲ್ಲಿ ಉತ್ತಮ ಬೋಧಕರಿದ್ದು, ಗುಣಮಟ್ಟದ ಶಿಕ್ಷಣ ದೊರಕುತ್ತಿದೆ. ಕಲಿಕೆಗೆ ಪೂರಕವಾದ ವಾತಾವರಣವಿದ್ದು ವಿದ್ಯಾರ್ಥಿಗಳು ಕ್ರೀಡೆ ಮತ್ತು ಸಾಂಸ್ಕೃತಿಕ ಕ್ಷೇತ್ರದಲ್ಲೂ ಮುಂದಿದ್ದಾರೆ" ಎಂದು ಹೇಳಿದರು.

ಕಾಲೇಜಿನ ಪ್ರಾಂಶುಪಾಲರಾದ ಶ್ರೀಮತಿ ಅಕ್ಕಮಹಾದೇವಮ್ಮ "ಪಠ್ಯದ ಜೊತೆಗೆ ಪಠ್ಯೇತರ ವಿಷಯಗಳಲ್ಲಿ ವಿದ್ಯಾರ್ಥಿಗಳು ತೊಡಗಿಸಿಕೊಳ್ಳುವುದರ ಜೊತೆಗೆ ಉತ್ತಮ ಫಲಿತಾಂಶವನ್ನು ಪಡೆದು ಉತ್ತೀರ್ಣರಾಗಿ" ಎಂದರು.

ನಂತರ ವಿವಿಧ ಸಾಂಸ್ಕೃತಿಕ ಹಾಗೂ ಕ್ರೀಡಾ ಚಟುವಟಿಕೆಗಳಲ್ಲಿ ವಿಜೇತರಾದ ಮತ್ತು ಹೆಚ್ಚು ಅಂಕಗಳನ್ನು ಪಡೆದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು. ದ್ವಿತೀಯ ಪಿಯುಸಿ ವಿದ್ಯಾರ್ಥಿಗಳು ತಮ್ಮ ಅನಿಸಿಕೆಗಳನ್ನು ಹಂಚಿಕೊಂಡರು.

### ಪ್ರತಿಭಾನ್ವೇಷಣಾ ಸಮಾರಂಭ

ಗುಂಡ್ಲುಪೇಟೆಯ ಜೆಎಸ್‌ಎಸ್ ಕಲಾ ಮತ್ತು ವಾಣಿಜ್ಯ ಕಾಲೇಜಿನಲ್ಲಿ ದಿನಾಂಕ 28.1.2019 ಮತ್ತು 29.1.2019ರಂದು ಸಾಂಸ್ಕೃತಿಕ ವೇದಿಕೆ ಅಡಿಯಲ್ಲಿ ಪ್ರತಿಭಾನ್ವೇಷಣಾ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು. ಸಮಾರಂಭದ ಉದ್ಘಾಟನೆ ನೆರವೇರಿಸಿ ಮಾತನಾಡಿದ ಗುಂಡ್ಲುಪೇಟೆಯ ಜವಹಾರ್ ಶಿಕ್ಷಣ ಸಂಸ್ಥೆಯ ಗೌರವ ಕಾರ್ಯದರ್ಶಿಗಳಾದ ಶ್ರೀ ಎಂ. ಪಿ. ಸುನೀಲ್ ಮಾತನಾಡಿ "ನಮ್ಮ ಸಂಸ್ಥೆ ಮತ್ತು ಜೆಎಸ್‌ಎಸ್ ಸಂಸ್ಥೆಯ ನಡುವೆ ನಿಕಟವಾದ ಸಂಬಂಧವಿದೆ. ಜೆಎಸ್‌ಎಸ್ ಶಿಕ್ಷಣ ಸಂಸ್ಥೆಯು ಸಾಮಾಜಿಕ, ಧಾರ್ಮಿಕ, ಶೈಕ್ಷಣಿಕ ಕ್ಷೇತ್ರಗಳಿಗೆ ಸಲ್ಲಿಸುತ್ತಿರುವ ಸೇವೆ ಅಪಾರ. ಪ್ರತಿಭೆ ಎಲ್ಲರಲ್ಲಿಯೂ ಇದೆ, ಆದರೆ ಅದನ್ನು ಪ್ರದರ್ಶಿಸುವ ಅವಕಾಶಗಳು ಸಿಗಬೇಕು. ಇಂತಹ ವೇದಿಕೆಗಳು ವಿದ್ಯಾರ್ಥಿಗಳು ತಮ್ಮ ಪ್ರತಿಭೆಗಳನ್ನು ಪ್ರದರ್ಶಿಸುವುದಕ್ಕೆ ಅವಕಾಶ ಮಾಡಿಕೊಡುತ್ತವೆ. ವೇದಿಕೆಗಳಿದ್ದರೆ ಸಾಲದು ವಿದ್ಯಾರ್ಥಿಗಳು ಆಸಕ್ತಿಯಿಂದ ಸ್ಪರ್ಧೆಗಳಲ್ಲಿ ಭಾಗವಹಿಸಬೇಕು. ಸ್ಪರ್ಧೆಗಳಲ್ಲಿ ಭಾಗವಹಿಸಿದಾಗ ಸೋಲು ಗೆಲುವು ಸಹಜ. ಬಹುತೇಕ ವಿದ್ಯಾರ್ಥಿಗಳು ಗ್ರಾಮೀಣ ಪ್ರದೇಶದವರಾಗಿರುವುದರಿಂದ ನಿಮ್ಮಲ್ಲಿ ಅಪಾರವಾದ ಪ್ರತಿಭೆ ಇದೆ. ಅದನ್ನು ಪ್ರದರ್ಶಿಸುವ ಮೂಲಕ ನಿಮ್ಮ ಸಾಮರ್ಥ್ಯ ತೋರ್ಪಡಿಸಬೇಕು" ಎಂದರು.

ಸಮಾರಂಭದಲ್ಲಿ ಉಪಸ್ಥಿತರಿದ್ದ ಐಕ್ಯೂಎಸಿ ಸಂಚಾಲಕಾದ ಶ್ರೀ ಟಿ.ಎಂ. ಮರಿಸ್ವಾಮಿ ಮಾತನಾಡುತ್ತಾ "ವಿದ್ಯಾರ್ಥಿಗಳು ಪಠ್ಯದ ಜೊತೆಗೆ ಪಠ್ಯೇತರ ಚಟುವಟಿಕೆಗಳಲ್ಲಿ ಭಾಗವಹಿಸಿ ತಮ್ಮ ಪ್ರತಿಭೆಯನ್ನು ಅನಾವರಣಗೊಳಿಸಿದಾಗ ವಿದ್ಯಾರ್ಥಿ ಜೀವನ ಸಾರ್ಥಕವಾಗುತ್ತದೆ. ಜೀವನದಲ್ಲಿ ಸೋಲು ಗೆಲುವು ಸಾಮಾನ್ಯ. ಗೆದ್ದಾಗ ಹಿಗ್ಗಬಾರದು, ಸೋತಾಗ ಕುಗ್ಗಬಾರದು, ಎರಡನ್ನು ಸಾಮಾನವಾಗಿ ಸ್ವೀಕರಿಸಬೇಕು" ಎಂದು ಹೇಳಿದರು.

ಅಧ್ಯಕ್ಷತೆ ವಹಿಸಿದ್ದ ಪ್ರಭಾರ ಪ್ರಾಂಶುಪಾಲರಾದ ಶ್ರೀ ಸಿ.ಎಸ್. ಹೊನ್ನೇಗೌಡರವರು ಮಾತನಾಡುತ್ತಾ "ವಿದ್ಯಾರ್ಥಿಗಳಲ್ಲಿ ಶ್ರದ್ಧೆ ಮತ್ತು ಕಲಿಯುವ ಮನಸ್ಸು

ಇರಬೇಕು. ಪ್ರತಿಭೆಗೆ ಬಡತನ ಸಿರಿತನದ ಭೇದಭಾವವಿಲ್ಲ. ಎಲ್ಲಾ ವಿದ್ಯಾರ್ಥಿಗಳು ತಮ್ಮಲ್ಲಿ ಅಡಗಿರುವ ಪ್ರತಿಭೆಯನ್ನು ಹೊರಸೂಸಲು ಇಂತಹ ವೇದಿಕೆ ತುಂಬಾ ಸಹಾಯಕವಾಗಿದೆ" ಎಂದು ತಿಳಿಸಿದರು.

ಕು. ಪಿ. ಸಹನಾ ಮತ್ತು ಕು. ಸುನೀತಾ ಪ್ರಾರ್ಥಿಸಿದರು. ಸಾಂಸ್ಕೃತಿಕ ವೇದಿಕೆ ಸಂಚಾಲಕರಾದ ಶ್ರೀ ಎಚ್.ಎಸ್. ಪರಶಿವ ಸ್ವಾಗತಿಸಿದರು. ಶ್ರೀಮತಿ ಜೀವಿತಾ ವಂದಿಸಿದರು. ಶ್ರೀಮತಿ ಎಂ.ಎನ್. ಜಯಶೀಲ ನಿರೂಪಿಸಿದರು.

### ಜ್ಯೋತಿ ಬೆಳಗಿಸುವಿಕೆ ಮತ್ತು ಪ್ರತಿಜ್ಞಾವಿಧಿ ಸ್ವೀಕಾರ ಸಮಾರಂಭ

ಕೊಳ್ಳೇಗಾಲದ ಜೆಎಸ್‌ಎಸ್ ನರ್ಸಿಂಗ್ ಶಾಲೆಯಲ್ಲಿ ದಿನಾಂಕ 16.2.2019ರಂದು "ಜ್ಯೋತಿ ಬೆಳಗಿಸುವಿಕೆ ಮತ್ತು ಪ್ರತಿಜ್ಞಾವಿಧಿ ಸ್ವೀಕಾರ ಸಮಾರಂಭ" ಏರ್ಪಡಿಸಲಾಗಿತ್ತು.

ಉದ್ಘಾಟನೆ ನೆರವೇರಿಸಿ ಮಾತನಾಡಿದ ಕೊಳ್ಳೇಗಾಲ ವಿಧಾನಸಭಾ ಕ್ಷೇತ್ರದ ಶಾಸಕರೂ ಹಾಗೂ ಮಾಜಿ ಸಚಿವರಾದ ಶ್ರೀ ಎನ್. ಮಹೇಶ್ ಅವರು ಸುತ್ತೂರು ಶ್ರೀಕ್ಷೇತ್ರ ಮತ್ತು ಶ್ರೀಮಠದ ಕಾರ್ಯಗಳನ್ನು ಸ್ಮರಿಸಿದರು. "ವಿದ್ಯಾರ್ಥಿಗಳಿಗೆ ತ್ಯಾಗ ಮತ್ತು ಸಹನೆ ಅತಿ ಮುಖ್ಯ. ಅದನ್ನು ಜೀವನದುದ್ದಕ್ಕೂ ಅಳವಡಿಸಿಕೊಂಡು ಹೋಗುವುದು ಅತ್ಯವಶ್ಯಕ" ಎಂದು ತಿಳಿಸಿ ಮೊಟ್ಟ ಮೊದಲ ಶಾಲಾ ವಾರ್ಷಿಕ ಸಂಚಿಕೆಯಾದ "ಆರೈಕೆ" ಬದುಕು ಬರಹಗಳ ಸಂಜೀವಿನಿಯನ್ನು ಬಿಡುಗಡೆಗೊಳಿಸಿದರು.

ವಿಶೇಷ ಆಹ್ವಾನಿತರಾದ ಗೌ. ಮುದ್ದುವೀರಪ್ಪ ಸ್ಮಾರಕ ಆಸ್ಪತ್ರೆಯ ಡಾ. ಶಿವರುದ್ರಸ್ವಾಮಿಯವರು ಶುಶ್ರೂಷಕರ ಉಗಮಕ್ಕೆ ಕಾರಣಕರ್ತರಾದ ಫ್ಲೋರೆನ್ಸ್ ನೈಟಿಂಗೇಲ್‌ರವರನ್ನು ಮತ್ತು ಅವರ ಕಾರ್ಯವೈಖರಿಗಳನ್ನು ಸ್ಮರಿಸಿ, ಈ ಶ್ರೇಷ್ಠ ಸೇವಾ ಕ್ಷೇತ್ರವನ್ನು ಆಯ್ಕೆಮಾಡಿಕೊಂಡಂತಹ ವಿದ್ಯಾರ್ಥಿಗಳಿಗೆ ಅಭಿನಂದನೆ ಸಲ್ಲಿಸಿದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಪ್ರೊ. ಉಮೇಶ್‌ರವರು ಸಾಂಸ್ಕೃತಿಕ ಮತ್ತು ಕ್ರೀಡಾಕೂಟಗಳ ವಿಜೇತರಿಗೆ ಬಹುಮಾನ ವಿತರಿಸಿದರು.

ಪ್ರಾಂಶುಪಾಲರಾದ ಶ್ರೀ ಡಿ.ಜಿ. ವಿಷಕಂಠಮೂರ್ತಿ ಪ್ರತಿಜ್ಞಾವಿಧಿ ಬೋಧಿಸಿದರು. ಉಪ ಪ್ರಾಂಶುಪಾಲರಾದ ಶ್ರೀಮತಿ ಟಿ. ರಂಗನಾಯಕಿ, ವಿದ್ಯಾರ್ಥಿಗಳು, ಪೋಷಕರು ಉಪಸ್ಥಿತರಿದ್ದರು. □

## ಚಾಮರಾಜನಗರದ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ನೇತ್ರದಾನದ ಅರಿವು

ದಿನಾಂಕ 30.1.2019ರಂದು ಯುವ ರೆಡ್‌ಕ್ರಾಸ್ ಘಟಕ ಮತ್ತು ಹಿರಿಯ ವಿದ್ಯಾರ್ಥಿನಿಯರ ಸಂಘ ಮತ್ತು ಆಂತರಿಕ ಗುಣಮಟ್ಟ ಖಾತರಿ ಸಮಿತಿ ವತಿಯಿಂದ ನೇತ್ರದಾನದ ಅರಿವು ಮತ್ತು ಮಹತ್ವ ಎಂಬ ವಿಷಯ ಕುರಿತು ಉಪನ್ಯಾಸ ಕಾರ್ಯಕ್ರಮ, ನೇತ್ರದಾನದ ನೋಂದಣಿ ಹಾಗೂ ಕಣ್ಣಿನ ತಪಾಸಣೆ ಹಮ್ಮಿಕೊಳ್ಳಲಾಗಿತ್ತು.

ಚಾಮರಾಜನಗರದ ಜಿಲ್ಲಾ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಅಧಿಕಾರಿಗಳಾದ ಡಾ. ಕೆ.ಎಚ್. ಪ್ರಸಾದ್ ಕಾರ್ಯಕ್ರಮದ ಉದ್ಘಾಟನೆ ನೆರವೇರಿಸಿ ನೇತ್ರದಾನದ ಮಹತ್ವವನ್ನು ವಿದ್ಯಾರ್ಥಿನಿಯರಿಗೆ ತಿಳಿಸುತ್ತಾ "ನೇತ್ರದಾನದಂತಹ ಕಾರ್ಯಗಳನ್ನು ವಿದ್ಯಾರ್ಥಿನಿಯರು ಮಾಡುವುದರ ಮೂಲಕ ಸಮಾಜಕ್ಕೆ ಒಳ್ಳೆಯ ಸಂದೇಶವನ್ನು ನೀಡಿ ಇತರರಿಗೆ ಮಾದರಿಯಾಗಬೇಕು" ಎಂದು ತಿಳಿಸಿದರು.

ಮುಖ್ಯ ಅತಿಥಿಗಳಾದ ಚಾಮರಾಜನಗರದ ಜಿಲ್ಲಾ ಅಂಧತ್ವ ನಿಯಂತ್ರಣ ಅಧಿಕಾರಿಗಳಾದ ಡಾ. ಬಾಲಸುಬ್ರಮಣ್ಯಂರವರು ಮಾತನಾಡಿ "ಇಂದ್ರಿಯಗಳಲ್ಲಿ

ನಯನವೇ ಪ್ರಧಾನವಾದದ್ದು, ನೇತ್ರದಾನ ಮಹಾದಾನ" ಎಂದು ಹೇಳಿದರು. ನೇತ್ರದಾನದ ವಿಧಿ ವಿಧಾನಗಳನ್ನು ವಿದ್ಯಾರ್ಥಿನಿಯರಿಗೆ ವಿವರಿಸಿದರು.

ಮತ್ತೊಬ್ಬ ಮುಖ್ಯ ಅತಿಥಿಗಳಾದ ಚಾಮರಾಜನಗರ ವೈದ್ಯಕೀಯ ವಿಜ್ಞಾನ ಕಾಲೇಜಿನ ನೇತ್ರ ಚಿಕಿತ್ಸಾ ವಿಭಾಗದ ಮುಖ್ಯಸ್ಥರಾದ ಡಾ. ಮಹೇಶ್ವರ್‌ರವರು ಮಾತನಾಡುತ್ತಾ "ನೇತ್ರದಾನದಂತಹ ಪುಣ್ಯದ ಕೆಲಸ ಬೇರಾವುದೂ ಇಲ್ಲ. ನೇತ್ರದಾನ ಮಾಡುವುದರ ಮೂಲಕ ಅಂಧರ ಬಾಳಿಗೆ ಬೆಳಕಾಗೋಣ. ಒಬ್ಬ ವ್ಯಕ್ತಿಯ ಮರಣದ ನಂತರ ಆತನ ಕಣ್ಣು ಮಣ್ಣಲ್ಲಿ ಮಣ್ಣಾಗಿ ಹೋಗುವುದಕ್ಕಿಂತ ಇನ್ನೊಬ್ಬರ ಬಾಳಿಗೆ ಬೆಳಕಾಗಲಿ" ಎಂದು ಅಭಿಪ್ರಾಯಪಟ್ಟರು.

ಚಾಮರಾಜನಗರದ ಭಾರತೀಯ ರೆಡ್‌ಕ್ರಾಸ್ ಸಂಸ್ಥೆ ಕಾರ್ಯದರ್ಶಿಗಳಾದ ಡಾ. ಮಹೇಶ್‌ರವರು ಮಾತನಾಡಿ "ಯಾವುದೇ ಅಂಗಾಂಗಳನ್ನು ದಾನ ಮಾಡಲು ಮನುಷ್ಯನಿಗೆ ಧೈರ್ಯ ಹಾಗೂ ಮನಸ್ಸು ಇರಬೇಕು. ಇಂತಹ ಕೆಲಸವನ್ನು ನಿಮ್ಮ ಕಾಲೇಜಿನ ವಿದ್ಯಾರ್ಥಿನಿಯರು ಮಾಡುತ್ತಿರುವುದು ಸಂತಸದ ವಿಷಯವಾಗಿದೆ" ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಪ್ರಾಂಶುಪಾಲರಾದ ಪ್ರೊ. ಎ.ಜೆ. ಶಿವಕುಮಾರ್ ಮಾತನಾಡುತ್ತಾ "ಶ್ರೀಮಠದ ಸೇವಾ ಕಾರ್ಯಗಳು ಅನನ್ಯ. ಆ ದಿಸೆಯಲ್ಲಿ ಕಾಲೇಜಿನಲ್ಲಿಯೂ ಇಂತಹ ಸೇವಾಕಾರ್ಯಗಳಿಗೆ ಒತ್ತು ಕೊಡುತ್ತಿದ್ದೇವೆ. ದಾನ ದಾನಗಳಲ್ಲಿ ಅನ್ನದಾನ ಶ್ರೇಷ್ಠವಾದದ್ದು. ಆದರೆ ಆದಕ್ಕಿಂತಲೂ ಶ್ರೇಷ್ಠದಾನ ನೇತ್ರದಾನ. ಮರಣದ ನಂತರ ಸ್ವರ್ಗ ಪ್ರಾಪ್ತಿಯಾಗಬೇಕಾದರೆ ಮನುಷ್ಯ ತನ್ನೆಲ್ಲ ಅಂಗಾಂಗಗಳನ್ನು ಒಳಗೊಂಡು ಸಂಸ್ಕಾರಗೊಳ್ಳಬೇಕು, ಅಂಗಾಂಗಗಳು ಊನಗೊಂಡು ಸಂಸ್ಕಾರವಾದರೆ ಸ್ವರ್ಗಪ್ರಾಪ್ತಿಯಾಗುವುದಿಲ್ಲ ಎಂಬ ಮೌಢ್ಯದಲ್ಲಿ ನಾವಿದ್ದೇವೆ. ಆದರೆ ವಾಸ್ತವವಾಗಿ ಸ್ವರ್ಗವನ್ನೇ ಯಾರು ನೋಡಿಲ್ಲದಿರುವಾಗ ಈ ರೀತಿಯ ಕಲ್ಪನೆಗಳನ್ನು ಬಿಟ್ಟು ಬದುಕಿದ್ದಾಗಲೇ ನೇತ್ರದಾನ ಮಾಡುವುದರ ಮೂಲಕ ಬೇರೆಯವರ ಬದುಕನ್ನು ಸಾರ್ಥಕಗೊಳಿಸೋಣ" ಎಂದು ತಿಳಿಸಿದರು. ನೇತ್ರದಾನ ಮಾಡಲು ನೋಂದಣಿ ಮಾಡಿಸಿರುವ ವಿದ್ಯಾರ್ಥಿನಿಯರಿಗೆ ಕಾಲೇಜಿನ ಪರವಾಗಿ ಧನ್ಯವಾದಗಳನ್ನು ಸಲ್ಲಿಸಿದರು.

ಕಾಲೇಜಿನ ವಿದ್ಯಾರ್ಥಿನಿಯರಾದ ಕು. ಸಿ. ರಮ್ಯ ಹಾಗೂ ಕು. ಆರ್. ಸಿಂಧು ಸಾಂಕೇತಿಕವಾಗಿ ನೇತ್ರದಾನಕ್ಕೆ ನೋಂದಣಿ ಮಾಡಿಕೊಳ್ಳುವುದರ ಮೂಲಕ ನೇತ್ರದಾನ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು.

ಕು. ಕಾಂಚನಾ ಪ್ರಾರ್ಥಿಸಿದರು. ಕು. ವರ್ಷಿತ ಸ್ವಾಗತಿಸಿದರು. ಶ್ರೀಮತಿ ಅರುಣಶ್ರೀ ಪ್ರಾಸ್ತಾವಿಕ ನುಡಿಗಳನ್ನಾಡಿದರು.

ನಂತರ ನಡೆದ ವಿಶೇಷೋಪನ್ಯಾಸ ಕಾರ್ಯಕ್ರಮದಲ್ಲಿ ಸಂಪನ್ಮೂಲ ವ್ಯಕ್ತಿಯಾದ ಚಾಮರಾಜನಗರದ ವೈದ್ಯಕೀಯ ವಿಜ್ಞಾನ ಕಾಲೇಜಿನ ನೇತ್ರ ಚಿಕಿತ್ಸಾ ವಿಭಾಗದ ಮುಖ್ಯಸ್ಥರಾದ ಡಾ. ಮಹೇಶ್ವರ್ ಕಣ್ಣಿನ ರಚನೆ, ಅದರ ವಿವಿಧ ಭಾಗಗಳು ಮತ್ತು ಮರಣದ ನಂತರ ನೇತ್ರವನ್ನು ಶಸ್ತ್ರಚಿಕಿತ್ಸೆಯ ಮೂಲಕ ಹೊರತೆಗೆದು ಅದನ್ನು ಮತ್ತೊಬ್ಬರಿಗೆ ಅಳಡಿಸುವ (ನೇತ್ರದಾನದ) ಪ್ರಕ್ರಿಯೆಯನ್ನು ದೃಶ್ಯೀಕರಿಸಿದ ವಿಡಿಯೋವನ್ನು ವಿದ್ಯಾರ್ಥಿನಿಯರಿಗೆ ವಿವರಿಸಿದರು. ಸಕ್ಕರೆ ಕಾಯಿಲೆ, ರಕ್ತದ ಒತ್ತಡ, ಕಣ್ಣಿನ ಪೊರೆ, ಶಸ್ತ್ರಚಿಕಿತ್ಸೆಯಾದ ವ್ಯಕ್ತಿಗಳು, ಹೃದಯ ಸಂಬಂಧಿ ಖಾಯಿಲೆ ಇರುವವರು ಕೂಡ ನೇತ್ರದಾನ ಮಾಡಬಹುದೆಂದು ಹೇಳಿದರು.

ವಿದ್ಯಾರ್ಥಿನಿಯರು ವೈದ್ಯರ ಜೊತೆ ಸಂವಾದ ನಡೆಸಿದರು.

□

ಡಾ. ಬಾಲಸುಬ್ರಹ್ಮಣ್ಯಂ ಹಾಗೂ ಡಾ. ನೇತ್ರಾರವರು ವಿದ್ಯಾರ್ಥಿನಿಯರಿಗೆ ಉಚಿತ ಕಣ್ಣಿನ ತಪಾಸಣೆಯನ್ನು ನಡೆಸಿ ಸೂಕ್ತವಾದ ಚಿಕಿತ್ಸೆ ಹಾಗೂ ಸಲಹೆಯನ್ನು ನೀಡಿದರು. ಸುಮಾರು 52 ಮಂದಿ ವಿದ್ಯಾರ್ಥಿನಿಯರು ಇದರ ಪ್ರಯೋಜನವನ್ನು ಪಡೆದುಕೊಂಡರು.

ಕಾಲೇಜಿನ 100 ವಿದ್ಯಾರ್ಥಿನಿಯರು ಮತ್ತು 16ಅಧ್ಯಾಪಕ ಹಾಗೂ ಅಧ್ಯಾಪಕೇತರ ವರ್ಗದವರು, ಪೋಷಕರೂ ಸಹ ನೇತ್ರದಾನಕ್ಕೆ ತಮ್ಮ ಹೆಸರನ್ನು ನೋಂದಣಿ ಮಾಡಿಸಿಕೊಂಡರು. ಕು. ಚಂದ್ರಕಲಾ ಸ್ವಾಗತಿಸಿದರು. ಕು. ರೋಜಾ ವಂದನಾರ್ಪಣೆ ಸಲ್ಲಿಸಿದರು. ಕು. ಶುಭಶ್ರೀ ಕಾರ್ಯಕ್ರಮವನ್ನು ನಿರೂಪಿಸಿದರು.

## ಸುತ್ತೂರು ವಸತಿ ಶಾಲೆಯಲ್ಲಿ ಶಾಲಾ ವಾರ್ಷಿಕೋತ್ಸವ

ಸುತ್ತೂರಿನ ಜೆಎಸ್‌ಎಸ್ ವಸತಿ ಶಾಲೆಯಲ್ಲಿ ದಿನಾಂಕ 16.2.2019ರಂದು ಶಾಲಾ ವಾರ್ಷಿಕೋತ್ಸವ ಸಮಾರಂಭವನ್ನು ಆಚರಿಸಲಾಯಿತು.

ಸಮಾರಂಭದ ಅಧ್ಯಕ್ಷತೆ ವಹಿಸಿ ಮಾತನಾಡಿದ ಜೆಎಸ್‌ಎಸ್ ಮಹಾವಿದ್ಯಾಪೀಠದ ಪಬ್ಲಿಕ್ ಶಾಲಾ ವಿಭಾಗದ ನಿರ್ದೇಶಕರಾದ ಶ್ರೀ ಶ್ರೀನಿವಾಸ್ ಕೆ. ಅಯ್ಯಂಗಾರ್‌ರವರು "ವಿದ್ಯಾರ್ಥಿಗಳು ಕೇವಲ ಓದಿಗೆ ಸೀಮಿತರಾಗದೆ ಸಾಂಸ್ಕೃತಿಕ ಮತ್ತು ಕ್ರೀಡಾ ಚಟುವಟಿಕೆಗಳಲ್ಲೂ ತೊಡಗಿಸಿಕೊಳ್ಳುವ ಮೂಲಕ ತಮ್ಮ ಸರ್ವತೋಮುಖ ವಿಕಾಸಕ್ಕೆ ಮುಂದಾಗಬೇಕು. ಸ್ಪರ್ಧಾತ್ಮಕ ಮನೋಭಾವವನ್ನು ಮೈಗೂಡಿಸಿಕೊಂಡು ತಮ್ಮ ಗುರಿಯತ್ತ ಸಾಗಿ ಯಶಸ್ಸು ಗಳಿಸಬೇಕು" ಎಂದು ಹೇಳಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಶ್ರೀ ನಟರಾಜ ಮಹಿಳಾ ವಸತಿ ಪ್ರಥಮದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಡಾ. ಎಂ. ಶಾರದರವರು ಮಾತನಾಡಿ "ವ್ಯಕ್ತಿಯ ವ್ಯಕ್ತಿತ್ವವನ್ನು ಕೇವಲ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳಷ್ಟೇ ನಿರ್ಧರಿಸಲಾರವು. ವಿದ್ಯಾರ್ಥಿಗಳು ಧೈರ್ಯದಿಂದ ಶಿಸ್ತುಬದ್ಧ ಅಭ್ಯಾಸ ನಡೆಸಿದರೆ ಉತ್ತಮ ಜೀವನವನ್ನು ರೂಪಿಸಿಕೊಳ್ಳಲು ಸಾಧ್ಯ. ಕ್ಷುಲ್ಲಕ ಕಾರಣಗಳಿಗೆಲ್ಲಾ ವಿದ್ಯಾರ್ಥಿಗಳು ತಮ್ಮ ಜೀವನವನ್ನು ಹಾಳುಗೆಡವಿಕೊಳ್ಳಬಾರದು" ಎಂದು ಸಲಹೆ ನೀಡಿದರು.

ಮತ್ತೋರ್ವ ಮುಖ್ಯ ಅತಿಥಿಗಳಾದ ಅಪ್ಪಾದೇಶ್ ಕ್ಲೀನ್ ಮೈಸೂರು ಫೌಂಡೇಷನ್ನಿನ ಸಂಚಾಲಕರಾದ ಶ್ರೀಮತಿ ಲೀಲಾ ಶಿವಕುಮಾರ್‌ರವರು ಮಾತನಾಡಿ "ವಿದ್ಯಾರ್ಥಿಗಳು ತಂದೆ ತಾಯಿಯರನ್ನು, ಗುರು ಹಿರಿಯರನ್ನು ಗೌರವಿಸುವುದನ್ನು ಕಲಿಯಬೇಕು. ಶ್ರದ್ಧೆಯಿಂದ ವಿದ್ಯಾಭ್ಯಾಸ ಮಾಡಿದರೆ ಯಶಸ್ಸನ್ನು ಗಳಿಸಲು ಸಾಧ್ಯ. ಶ್ರಮವಿಲ್ಲದೆ ಏನನ್ನೂ ಗಳಿಸಲಾಗದು. ಸ್ವಚ್ಛತೆಯ ಬಗ್ಗೆ ಪ್ರತಿಯೊಬ್ಬರು ಜಾಗೃತಿ ವಹಿಸಬೇಕು. ಸಾತ್ವಿಕ ಗುಣಗಳನ್ನು ಮೈಗೂಡಿಸಿಕೊಳ್ಳಬೇಕು" ಎಂದು ಹೇಳಿದರು.

ಇದೇ ಸಂದರ್ಭದಲ್ಲಿ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಅನಿವಾಸಿ ಭಾರತೀಯರಾದ ಅಮೇರಿಕಾದಲ್ಲಿ ನೆಲೆಸಿರುವ ಶ್ರೀಮತಿ ಭಾರತಿರೆಡ್ಡಿ ಹಾಗೂ ಶ್ರೀಮತಿ ಅರ್ಚನರೆಡ್ಡಿ ಬಹುಮಾನ ವಿತರಿಸಿದರು. ಸಮಾರಂಭದಲ್ಲಿ ಜೆಎಸ್‌ಎಸ್ ಸಂಸ್ಥೆಯ ಸಂಯೋಜನಾಧಿಕಾರಿಗಳಾದ ಶ್ರೀ ಜಿ.ಎಲ್. ತ್ರಿಪುರಾಂತಕ, ಶ್ರೀ ಸಂಪತ್ತು, ಶ್ರೀ ವೀರಭದ್ರಯ್ಯ ಮುಖ್ಯೋಪಾಧ್ಯಾಯರುಗಳಾದ ಶ್ರೀ ಜಿ. ಶಿವಮಲ್ಲು, ಶ್ರೀಮತಿ ಸಿ.ಪಿ. ನಿರ್ಮಲ, ಶ್ರೀ ಬಿ.ಎಂ. ಸಿದ್ದಪ್ಪ, ಶ್ರೀ ಜಿ.ಎಂ. ಷಡಕ್ಷರಿ ಹಾಜರಿದ್ದರು.

ಸಮಾರಂಭಕ್ಕೂ ಮುನ್ನ ಹುತಾತ್ಮರಾದ ವೀರಯೋಧರಿಗೆ ಒಂದು ನಿಮಿಷ ಮೌನ ಶ್ರದ್ಧಾಂಜಲಿ

ಸಲ್ಲಿಸಲಾಯಿತು.

ಪ್ರೌಢಶಾಲಾ ವಿಭಾಗದ ಶೈಕ್ಷಣಿಕ ವರದಿಯನ್ನು ಕು. ಎ. ಮೇಘು, ಕ್ರೀಡಾ ವರದಿಯನ್ನು ಕು. ಪಿ.ಎಚ್. ಶೃತಿ ಮಂಡಿಸಿದರು. ಹಿರಿಯ ಪ್ರಾಥಮಿಕ ಶಾಲಾ ವಿಭಾಗದ ಶೈಕ್ಷಣಿಕ ವರದಿಯನ್ನು ಕು. ಅನ್ನಪೂರ್ಣ, ಕ್ರೀಡಾ ವರದಿಯನ್ನು ಕು. ಸಂಗೀತಾ ಮಂಡಿಸಿದರು. ಶಾಲಾ ವಿದ್ಯಾರ್ಥಿಗಳು ಪ್ರಾರ್ಥಿಸಿದರು. ಕು. ಸುಮಲತ ಸ್ವಾಗತಿಸಿದರು. ಕು. ಎ. ಯಶೋಧ ವಂದಿಸಿದರು. ಶ್ರೀ ಮಲ್ಲಿಕಾರ್ಜುನ ದೇಸಾಯಿ ನಿರೂಪಿಸಿದರು.

## ಜ್ಯೋತಿ ಬೆಳಗಿಸುವಿಕೆ ಮತ್ತು ಪ್ರತಿಜ್ಞಾವಿಧಿ ಸ್ವೀಕಾರ ಸಮಾರಂಭ

ಚಾಮರಾಜನಗರ ಜೆಎಸ್‌ಎಸ್ ನರ್ಸಿಂಗ್ ಶಾಲಾವತಿಯಿಂದ ದಿನಾಂಕ 14.2.2019ರಂದು ಜ್ಯೋತಿ ಬೆಳಗಿಸುವಿಕೆ ಮತ್ತು ಪ್ರತಿಜ್ಞಾವಿಧಿ ಸ್ವೀಕಾರ ಸಮಾರಂಭವನ್ನು ಹಮ್ಮಿಕೊಳ್ಳಲಾಗಿತ್ತು.

ಚಾಮರಾಜನಗರದ ಅಪರ ಜಿಲ್ಲಾಧಿಕಾರಿಗಳಾದ ಶ್ರೀ ಸಿ.ಎಲ್. ಆನಂದ್ ರವರು ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿ ನರ್ಸಿಂಗ್ ವಿದ್ಯಾರ್ಥಿಗಳು ತಮ್ಮ ವೃತ್ತಿಯನ್ನು ಗೌರವಿಸುವುದರ ಮೂಲಕ ಸೇವಾ ಮನೋಭಾವದಿಂದ ಕರ್ತವ್ಯವನ್ನು ನಿರ್ವಹಿಸಬೇಕು. ನರ್ಸಿಂಗ್ ವೃತ್ತಿಯು ಉತ್ತಮವಾದದ್ದು ಮತ್ತು ಶಿಸ್ತುಬದ್ಧವಾದದ್ದು. ದೇಶದ ಗಡಿಯನ್ನು ಕಾಯುತ್ತಿರುವ ನಮ್ಮ ಸೈನಿಕರು ಹೇಗೆ ಶಿಸ್ತಿನಿಂದ ವರ್ತಿಸುತ್ತಾರೋ ಹಾಗೆಯೇ ಶುಶ್ರೂಷಕ ವಿದ್ಯಾರ್ಥಿಗಳು ಸಹ ಶಿಸ್ತಿನಿಂದಿರುತ್ತಾರೆ. ನರ್ಸಿಂಗ್ ವಿದ್ಯಾರ್ಥಿಗಳು ಇನ್ನು ಹೆಚ್ಚಿನ ವಿದ್ಯಾಭ್ಯಾಸವನ್ನು ಮಾಡಿ ಹೆಚ್ಚಿನ ಜ್ಞಾನಾರ್ಜನೆ ಪಡೆದು ತಮ್ಮ ಜೀವನವನ್ನು ಉತ್ತಮವಾಗಿ ರೂಪಿಸಿಕೊಳ್ಳಬೇಕು" ಎಂದು ಹಾರೈಸಿದರು.

ನರ್ಸಿಂಗ್ ಟ್ಯೂಟರ್ ಶ್ರೀಮತಿ ಮಧು ಶಾಲೆಯ ವಾರ್ಷಿಕ ವರದಿ ಮಂಡಿಸಿದರು. 2017-18ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಅತಿ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಮತ್ತು ವಾರ್ಷಿಕ ಸಾಂಸ್ಕೃತಿಕ ಕಾರ್ಯಕ್ರಮ ಮತ್ತು ವಾರ್ಷಿಕ ಕ್ರೀಡಾಕೂಟದಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು.

□




ಚಾಮರಾಜನಗರ ಜೆಎಸ್‌ಎಸ್ ನರ್ಸಿಂಗ್ ಶಾಲಾಯಲ್ಲಿ ನಡೆದ ಜ್ಯೋತಿ ಬೆಳಗಿಸುವಿಕೆ ಮತ್ತು ಪ್ರತಿಜ್ಞಾವಿಧಿ ಸ್ವೀಕಾರ ಸಮಾರಂಭವನ್ನು ಚಾಮರಾಜನಗರದ ಅಪರ ಜಿಲ್ಲಾಧಿಕಾರಿಗಳಾದ ಶ್ರೀ ಸಿ.ಎಲ್. ಆನಂದ್ ರವರು ಉದ್ಘಾಟಿಸಿದರು

ಚಾಮರಾಜನಗರದ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳಾದ ಡಾ. ಕೆ.ಎಚ್. ಪ್ರಸಾದ್‌ರವರು ಮಾತನಾಡಿ "ಸ್ವಾತಂತ್ರ್ಯಪೂರ್ವದಲ್ಲಿ ಸಾಂಕ್ರಾಮಿಕ ರೋಗಗಳಾದ ಪ್ಲೇಗ್, ಮಲೇರಿಯಾ ಕಾಲರಾ ವ್ಯಕ್ತಿಯನ್ನು ಕೊಲ್ಲುತ್ತಿದ್ದವು. ಆದರೆ ವೈದ್ಯಕೀಯ ಅಭಿವೃದ್ಧಿಯ ಪರಿಣಾಮ ಸಾಂಕ್ರಾಮಿಕ ರೋಗಗಳು ಇಲ್ಲದಂತಾಗಿವೆ. ಹಾಗೆಯೇ ಪ್ರಸ್ತುತ ಮಧುಮೇಹ ಹೆಚ್ಚಾಗಿದೆ. ಉದ್ಯೋಗಗಳು ವ್ಯಕ್ತಿಯ ಆಯಸ್ಸನ್ನು ನಿರ್ಧರಿಸುತ್ತವೆ. ಜಾತಿ ಭೇದ, ವರ್ಣಭೇದವಿಲ್ಲದೇ ರೋಗಿಗೆ ಚಿಕಿತ್ಸೆ ನೀಡುವವರು ಶುಶ್ರೂಷಕರು. ಶುಶ್ರೂಷಕರು ಉತ್ತಮ ನೈಪುಣ್ಯತೆ ಪಡೆದರೆ ಉತ್ತಮ ಭವಿಷ್ಯ ಕಟ್ಟಿಕೊಳ್ಳಬಹುದು. ಶುಶ್ರೂಷಕರ ಕೆಲಸ ಒಂದು ರೀತಿಯ ಪುಣ್ಯದ ಕೆಲಸವಾಗಿದೆ ಎಂದು ತಿಳಿದು ಸೇವೆ ಮಾಡಬೇಕು" ಎಂದು ಸಲಹೆ ನೀಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಜೆಎಸ್‌ಎಸ್ ಮಹಾವಿದ್ಯಾಪೀಠದ ವೈದ್ಯಕೀಯ ಶಿಕ್ಷಣ ವಿಭಾಗದ ನಿರ್ದೇಶಕರಾದ ಶ್ರೀ ಆರ್. ಮಹೇಶ್ ರವರು ಮಾತನಾಡಿ "ನಮ್ಮ ದೇಶ ಆರೋಗ್ಯ ಕ್ಷೇತ್ರದಲ್ಲಿ ಪ್ರಗತಿ ಕಾಣುತ್ತಿದ್ದು ದಿನೇದಿನೇ ರೋಗಿಗಳ ಚಿಕಿತ್ಸೆ ವಿಧಾನವು ಬದಲಾಗುತ್ತಿದೆ. ಶುಶ್ರೂಷಕರಿಗೆ ಉತ್ತಮ ಬೇಡಿಕೆ ಇದ್ದು ಅವಶ್ಯಕವಿರುವಷ್ಟು ಸಿಬ್ಬಂದಿ ಪೂರೈಕೆಯಾಗುತ್ತಿಲ್ಲ. ನರ್ಸಿಂಗ್ ಮುಗಿಸಿದ ನಂತರ ಶುಶ್ರೂಷಕರಿಗೆ ಉದ್ಯೋಗದ ಸಮಸ್ಯೆ ಕಾಡುವುದಿಲ್ಲ. ತರಬೇತಿ ಮುಗಿಸಿದ ತಕ್ಷಣ ಉದ್ಯೋಗ ದೊರಕುವುದು. ನರ್ಸಿಂಗ್ ವಿದ್ಯಾರ್ಥಿಗಳು ಉತ್ತಮವಾದ ಸೇವೆಯನ್ನು ನೀಡಬೇಕು. ಜೀವನವನ್ನು ಉತ್ತಮವಾದ ರೀತಿಯಲ್ಲಿ ರೂಪಿಸಿಕೊಳ್ಳಬೇಕು" ಎಂದು ಸಲಹೆ ನೀಡಿದರು.

ಕು. ಚೈತ್ರ ಮತ್ತು ತಂಡದವರು ಪ್ರಾರ್ಥಿಸಿದರು. ಜಿಲ್ಲಾ ಆಸ್ಪತ್ರೆಯ ಪ್ರಭಾರ ಶುಶ್ರೂಷಕ ಅಧೀಕ್ಷಕರಾದ ಶ್ರೀಮತಿ ಪಿ.ಜಿ. ಪದ್ಮಾವತಿ ಮತ್ತು ನರ್ಸಿಂಗ್ ಟ್ಯೂಟರ್ ಶ್ರೀಮತಿ ಎಸ್. ಸಂಧ್ಯಾಶ್ರೀ ಜ್ಯೋತಿ ಬೆಳಗಿಸಿದರು. ಪ್ರಾಂಶುಪಾಲರಾದ ಶ್ರೀ ಜಿ. ವಿನಯ್ ಕುಮಾರ್ ಪ್ರತಿಜ್ಞಾವಿಧಿ ಬೋಧಿಸಿದರು.

□

## ಪ್ರಜಾಪ್ರಭುತ್ವ ಉಳಿವಿಗೆ ಮತದಾನ ಅವಶ್ಯ - ಪ್ರೊ. ಎಂ.ಪಿ. ನಟರಾಜ್

"ಯುವ ಮತದಾರರು ಸೇರಿದಂತೆ ದೇಶದ ಮತದಾರರು ಎಚ್ಚರ ವಹಿಸಿ ಮತದಾನ ಮಾಡಿದರೆ ಪ್ರಜಾಪ್ರಭುತ್ವದ ಉಳಿವು" ಎಂದು ನಿವೃತ್ತ ಪ್ರಾಂಶುಪಾಲರಾದ ಪ್ರೊ. ಎಂ.ಪಿ. ನಟರಾಜ್‌ರವರು ಅಭಿಪ್ರಾಯಪಟ್ಟರು.

ಕೊಳ್ಳೇಗಾಲದ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ರಾಜ್ಯಶಾಸ್ತ್ರ ವಿಭಾಗ, ಯೂತ್ ರೆಡ್ ಕ್ರಾಸ್ ಹಾಗೂ ರಾಷ್ಟ್ರೀಯ ಸೇವಾ ಯೋಜನೆ ಘಟಕಗಳ ವತಿಯಿಂದ ರಾಷ್ಟ್ರೀಯ ಮತದಾರರ ದಿನಾಚರಣೆ ಅಂಗವಾಗಿ ಆಯೋಜಿಸಿದ್ದ ಚಾಮರಾಜನಗರ ಜಿಲ್ಲಾ ಅಂತರ ಕಾಲೇಜು ಮಟ್ಟದ ಭಾಷಣ ಹಾಗೂ ಚರ್ಚಾ ಸ್ಪರ್ಧೆಗಳನ್ನು ಉದ್ಘಾಟಿಸಿ ಅವರು ಮಾತನಾಡಿದರು. "ಪ್ರಜಾಪ್ರಭುತ್ವದಲ್ಲಿ ಪ್ರಜೆಗಳೇ ಪ್ರಭುಗಳಾಗಿದ್ದು, ಸಮರ್ಥ ಜನಪ್ರತಿನಿಧಿಗಳನ್ನು ಆಯ್ಕೆ ಮಾಡುವುದು ಎಲ್ಲ ಮತದಾರರ ಮುಖ್ಯ ಕರ್ತವ್ಯ. 1988ರವರೆಗೆ 21 ವರ್ಷ ಪೂರೈಸಿದವರಿಗೆ ಮತದಾನದ ಹಕ್ಕು ನೀಡಲಾಗಿತ್ತು. ಆ ನಂತರ 18 ವರ್ಷ ಪೂರೈಸಿದವರಿಗೂ ಮತದಾನದ ಹಕ್ಕನ್ನು ನೀಡಲಾಗಿದೆ. ಪ್ರಸ್ತುತ ದೇಶದ ಜನಸಂಖ್ಯೆಯ ಪೈಕಿ ಯುವ ಜನತೆಯೇ ಅಧಿಕವಾಗಿದ್ದು ಪ್ರತಿಯೊಬ್ಬರೂ ಮತದಾನದಲ್ಲಿ ಪಾಲ್ಗೊಂಡಿದ್ದೇ ಆದರೆ ಸದೃಢ ಭಾರತ ನಿರ್ಮಾಣ ಸಾಧ್ಯ" ಎಂದು ತಿಳಿಸಿದರು.

ಅಧ್ಯಕ್ಷತೆ ವಹಿಸಿ ಮಾತನಾಡಿದ ಪ್ರಾಂಶುಪಾಲ ಪ್ರೊ. ಉಮೇಶ "ಯಾವುದೇ ದೇಶದ ಅಭಿವೃದ್ಧಿ ಅಲ್ಲಿಯ ರಾಜಕಾರಣಿಗಳ ದಕ್ಷತೆ ಹಾಗೂ ಮತದಾನದ ಪ್ರಮಾಣವನ್ನು ಅವಲಂಭಿಸಿರುತ್ತದೆ. ಪ್ರಜೆಗಳು ಕೇವಲ ಮತದಾರರಷ್ಟೇ ಅಲ್ಲ, ರಾಷ್ಟ್ರವನ್ನು ಬಲಾಢ್ಯವಾಗಿ ಕಟ್ಟುವ ಶಕ್ತಿಯೂ ಅವರಿಗಿದೆ. ಉತ್ತಮ ಆಡಳಿತಗಾರ ರಾಷ್ಟ್ರವನ್ನು ಸಮರ್ಥವಾಗಿ ನಡೆಸಲಿಲ್ಲ ಎನ್ನುವುದಕ್ಕೆ ನಮ್ಮ ದೇಶದಲ್ಲಿಯೇ ಹಲವು ನಾಯಕರು ಉದಾಹರಣೆಯಾಗಿ ಕಾಣಸಿಗುತ್ತಾರೆ. ಆದ್ದರಿಂದ ಮತದಾನದ ಮಹತ್ವವನ್ನು ಅರಿತು ಮತದಾನದ ಹಕ್ಕನ್ನು ತಪ್ಪದೇ ಚಲಾಯಿಸಿ ಸಮರ್ಥ ನಾಯಕರನ್ನು ಆಯ್ಕೆ ಮಾಡಿ" ಎಂದು ಕರೆ ನೀಡಿದರು.

ವೇದಿಕೆಯಲ್ಲಿ ಪ್ರೊ. ಎಂ. ಬಸವರಾಜು, ಪ್ರೊ. ಪ್ರಕಾಶ್‌ರವರು ಉಪಸ್ಥಿತರಿದ್ದರು. ಚರ್ಚಾಸ್ಪರ್ಧೆಯಲ್ಲಿ ನಿಸರ್ಗ ಕಾಲೇಜ್ ಆಫ್ ಮ್ಯಾನೆಂಜ್‌ಮೆಂಟಿನ ಧನುಶ್ರೀ ಪ್ರಥಮ ಹಾಗೂ ಕೊಳ್ಳೇಗಾಲದ ಜೆಎಸ್‌ಎಸ್ ಮಹಿಳಾ ಕಾಲೇಜಿನ ರಂಜಿತ ದ್ವಿತೀಯ ಸ್ಥಾನ ಪಡೆದರು. ಹಾಗೂ ಭಾಷಣ ಸ್ಪರ್ಧೆಯಲ್ಲಿ ಚಾಮರಾಜನಗರದ ಜೆಎಸ್‌ಎಸ್ ಮಹಿಳಾ ಕಾಲೇಜಿನ ಕು. ಮಹಾಲಕ್ಷ್ಮಿ ಪ್ರಥಮ ಸ್ಥಾನ ಹಾಗೂ ಕೊಳ್ಳೇಗಾಲ ಜೆಎಸ್‌ಎಸ್ ಮಹಿಳಾ ಕಾಲೇಜಿನ ಕು. ಅನುಪಮ ದ್ವಿತೀಯ ಸ್ಥಾನವನ್ನು ಪಡೆದರು.

---

## ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು, ನಂಜನಗೂಡು

### ಕ್ರೀಡಾಕೂಟ

ದಿನಾಂಕ 19.1.2019ರಂದು 2018-19ನೇ ಸಾಲಿನ ಅಥ್ಲೇಟಿಕ್ ಕ್ರೀಡಾಕೂಟವನ್ನು ಜೆಎಸ್‌ಎಸ್ ಪದವಿ ಮತ್ತು ಪದವಿಪೂರ್ವ ಕಾಲೇಜುಗಳ ಸಹಯೋಗ ದೊಂದಿಗೆ ನಡೆಸಲಾಯಿತು. ಉದ್ಘಾಟನೆಯನ್ನು ವಾಣಿಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಪ್ರೊ. ಎಂ.ಪಿ. ವಿಜಯೇಂದ್ರಕುಮಾರ್ ನೆರವೇರಿಸಿದರು. ಮುಖ್ಯ ಅತಿಥಿಗಳಾಗಿದ್ದ ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಸಿ.ವಿ. ಬಸವರಾಜುರವರು ಮಾತನಾಡುತ್ತಾ "ಪ್ರತಿಯೊಬ್ಬ ವಿದ್ಯಾರ್ಥಿಯು ತನಗೆ ಆಸಕ್ತಿಯಿರುವ ಕ್ರೀಡೆಯಲ್ಲಿ ಭಾಗವಹಿಸಬೇಕು. ಕ್ರೀಡೆ ನಿಮ್ಮನ್ನು ದೈಹಿಕ ಮತ್ತು ಮಾನಸಿಕವಾಗಿ ಸದೃಢವಂತರನ್ನಾಗಿ ಮಾಡುತ್ತದೆ. ಸಾಧನೆ ಇದ್ದರೆ ಮಾತ್ರ ಯಶಸ್ಸು ಸಾಧ್ಯ" ಎಂದರು.

ಕು. ಮಂಜುಳ ಪ್ರಾರ್ಥಿಸಿದರು. ಶ್ರೀ ಪಳನಿಸ್ವಾಮಿ ಸ್ವಾಗತಿಸಿದರು. ಶ್ರೀ ರವಿಕುಮಾರ್ ವಂದಿಸಿದರು. ಕು. ತೇಜಸ್ವಿನಿ ಕಾರ್ಯಕ್ರಮ ನಿರೂಪಿಸಿದರು.

ಕ್ರೀಡಾಕೂಟದಲ್ಲಿ ವಿವಿಧ ಓಟದ ಸ್ಪರ್ಧೆ, ಗುಂಡು ಎಸೆತ, ಭರ್ಜಿ ಎಸೆತ, ಎತ್ತರ ಜಿಗಿತ, ದೂರ ಜಿಗಿತ, ಕಡ್ಡಿ ಎಸೆತ ಮುಂತಾದ ಕ್ರೀಡೆಗಳು ನಡೆದವು.

### ಗುರುಸ್ಮರಣಾ ಕಾರ್ಯಕ್ರಮ

ಶಿವೈಕ್ಯರಾದ ಡಾ. ಶ್ರೀ ಶಿವಕುಮಾರಸ್ವಾಮಿಗಳವರ ಗುರುಸ್ಮರಣೆ ಕಾರ್ಯಕ್ರಮವನ್ನು ದಿನಾಂಕ 22.1.2019ರಂದು ನಡೆಸಲಾಯಿತು. ವಾಣಿಜ್ಯಶಾಸ್ತ್ರ ವಿಭಾಗದ ಮುಖ್ಯಸ್ಥರಾದ ಪ್ರೊ. ಎಂ.ಪಿ. ವಿಜಯೇಂದ್ರಕುಮಾರ್‌ರವರು ನುಡಿನಮನವನ್ನು ಸಲ್ಲಿಸಿ ಮಾತನಾಡುತ್ತಾ "ಸರಳ ಜೀವನ, ಧರ್ಮ, ಪ್ರೇಮ, ಪರಿಶ್ರಮ, ಪರಹಿತದಲ್ಲೇ ಸಂತೋಷ ಕಾಣುತ್ತಿದ್ದ ಶ್ರೀಗಳು ಯಾವುದರಲ್ಲೂ ಯಾರಿಗೂ ಕೊರತೆಯಿಲ್ಲದಂತೆ ನೋಡಿಕೊಳ್ಳುತ್ತಿದ್ದ ಮಾತೃ ಹೃದಯಿ. 60 ವಿದ್ಯಾರ್ಥಿಗಳಿಂದ ಪ್ರಾರಂಭಗೊಂಡ ಮಠದ ದಾಸೋಹ ಇಂದು 10ಸಾವಿರ ವಿದ್ಯಾರ್ಥಿಗಳಿಗೆ ದಾಸೋಹವನ್ನು ನೀಡುತ್ತಿದೆ. ಶ್ರೀಗಳು ಬೃಹತ್

ವಟವೃಕ್ಷವಾಗಿ ಎಲ್ಲರಿಗೂ ಆಶ್ರಯದಾತರಾಗಿದ್ದರು. ಇಂದು ಅನಾಥಪ್ರಜ್ಞೆ ಎಲ್ಲರನ್ನು ಕಾಡುತ್ತಿದೆ. ಶ್ರೀಗಳು ದೈಹಿಕವಾಗಿ ನಮ್ಮ ಮುಂದೆ ಇಲ್ಲದಿದ್ದರೂ ಅವರ ತತ್ವ, ಕಾರ್ಯ, ಆದರ್ಶಗಳು ಜನಮಾನಸದಲ್ಲಿ ಅಚ್ಚಳಿಯದೆ ಉಳಿದಿದೆ. ಶತಾಯುಷಿಗಳು ನಮ್ಮ ಮುಂದೆ ಇಂತಹ ಕಾರ್ಯ ಕೈಗೊಂಡಿರುವುದೇ ಒಂದು ಪವಾಡ. ಇವರ ಕಾರ್ಯವು ಒಂದು ಪುರಾಣದಷ್ಟೇ ಮಹತ್ವ ಪಡೆದಿದೆ. ಇವರನ್ನು ನೋಡುವ, ಇವರೊಂದಿಗೆ ಬದುಕುವ ಪುಣ್ಯ ನಮಗೆ ದೊರೆತಿದೆ. ಇದು ಪೂರ್ವ ಜನ್ಮದ ಸುಕೃತ" ಎಂದು ಹೇಳಿದರು.

ಈ ಕಾರ್ಯಕ್ರಮದಲ್ಲಿ ಪದವಿ ಮತ್ತು ಪದವಿಪೂರ್ವ ಕಾಲೇಜಿನ ಪ್ರಾಂಶುಪಾಲರು, ಅಧ್ಯಾಪಕ, ಅಧ್ಯಾಪಕೇತರರು, ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

### ವಿಶೇಷ ಉಪನ್ಯಾಸ

ದಿನಾಂಕ 18.2.2019ರಂದು ರಸಾಯನಶಾಸ್ತ್ರ ವಿಭಾಗದ ವತಿಯಿಂದ ವಿಶೇಷ ಉಪನ್ಯಾಸವನ್ನು ಏರ್ಪಡಿಸಲಾಗಿತ್ತು. "ಸ್ಪೆಕ್ಟ್ರೋಸ್ಕೋಪಿ" ಎಂಬ ವಿಷಯವಾಗಿ ಮೈಸೂರಿನ ಮಾನಸ ಗಂಗೋತ್ರಿಯ ರಸಾಯನಶಾಸ್ತ್ರ ವಿಭಾಗದ ಪ್ರಾಧ್ಯಾಪಕರಾದ ಡಾ. ಡಿ. ಚೆನ್ನೇಗೌಡರವರು ಉಪನ್ಯಾಸ ನೀಡಿದರು. ಸ್ಪೆಕ್ಟ್ರೋಸ್ಕೋಪಿಯ ವಿಧಗಳು, ಇಂದಿನ ದಿನಗಳಲ್ಲಿ ಇದರ ಬಳಕೆ ಮತ್ತು ಪ್ರಯೋಜನಗಳ ಬಗ್ಗೆ ತಿಳಿಸಿ ಇದರ ಮೂಲಕ ಕ್ಯಾನ್ಸರ್‌ನಂತಹ ಭೀಕರ ಕಾಯಿಲೆಯನ್ನು ಕಂಡು ಹಿಡಿಯಬಹುದು ಎಂದರು.

ಪ್ರಾಂಶುಪಾಲರಾದ ಪ್ರೊ. ಎಚ್.ಎಸ್. ನಾಗೇಂದ್ರಕುಮಾರ್‌ರವರು ಅಧ್ಯಕ್ಷತೆ ವಹಿಸಿದ್ದರು. ಕಾಲೇಜು ಶಿಕ್ಷಣ ವಿಭಾಗದ ನಿರ್ದೇಶಕರಾದ ಶ್ರೀ ಮೊರಬದ ಮಲ್ಲಿಕಾರ್ಜುನರವರು ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಕು. ಮಂಜುಳ ಪ್ರಾರ್ಥಿಸಿದರು. ಶ್ರೀಮತಿ ರಕ್ಷಿತಾ ಸ್ವಾಗತಿಸಿದರು. ಶ್ರೀ ಮಂಜುನಾಥ್ ವಂದಿಸಿದರು.

### ಕ್ರಾಫ್ಟ್ ಬಜಾರ್ - 2019

ನವದೆಹಲಿಯ ಭಾರತ ಸರಕಾರದ ಜವಳಿ ಮಂತ್ರಾಲಯ ಕರಕುಶಲ ಇಲಾಖೆಯ ಸಹಯೋಗ ದೊಂದಿಗೆ ಮೈಸೂರಿನ ಜೆಎಸ್‌ಎಸ್ ಅರ್ಬನ್ ಹಾತ್‌ನಲ್ಲಿ ಕ್ರಾಫ್ಟ್ಸ್ ಬಜಾರ್ -2019 ಅನ್ನು ಆಯೋಜಿಸಲಾಗಿದ್ದು ಅದರ ಉದ್ಘಾಟನೆಯು ದಿನಾಂಕ 8.2.2019ರಂದು ನೆರವೇರಿತು.

ಬಿಟಿವಿ ಮುಖ್ಯಸ್ಥರಾದ ಶ್ರೀ ಜಿ.ಎಂ. ಕುಮಾರ್‌ರವರು ಉದ್ಘಾಟನೆಯನ್ನು ನೆರವೇರಿಸಿದರು. ಕರ್ನಾಟಕ ಲಲಿತಕಲಾ ಅಕಾಡೆಮಿಯ ಅಧ್ಯಕ್ಷರಾದ ಪ್ರೊ. ಎಂ.ಜೆ. ಕಮಲಾಕ್ಷಿ ಅಧ್ಯಕ್ಷತೆ ವಹಿಸಿದ್ದರು. ಚಿತ್ರನಟಿ ಶ್ರೀಮತಿ ಅಮೂಲ್ಯರವರು ವಿಶೇಷ ಅತಿಥಿಯಾಗಿ ಭಾಗವಹಿಸಿದ್ದರು. ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿಗಳಾದ ಶ್ರೀ ಡಾ. ಸಿ.ಜಿ. ಬೆಟಸೂರಮಠ, ತಾಂತ್ರಿಕ ಶಿಕ್ಷಣ ವಿಭಾಗದ ನಿರ್ದೇಶಕರಾದ ಡಾ. ಸಿ. ರಂಗನಾಥಯ್ಯ, ಜಂಟಿ ನಿರ್ದೇಶಕರಾದ ಶ್ರೀ ಬಿ.ಆರ್. ಉಮಾಕಾಂತ್ ಮತ್ತು ಭಾರತ ಸರಕಾರದ ಜವಳಿ ಮಂತ್ರಾಲಯ ಕರಕುಶಲ ಸೇವಾ ಕೇಂದ್ರದ ಸಹಾಯಕ ನಿರ್ದೇಶಕರಾದ ಶ್ರೀ ಕೆ.ಎಸ್. ಸುನಿಲ್ ಕುಮಾರ್ ಅತಿಥಿಗಳಾಗಿ ಭಾಗವಹಿಸಿದ್ದರು.

### ಬಜೆಟ್ ಕುರಿತು ಸಂವಾದ ಕಾರ್ಯಕ್ರಮ

ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ಕಾಲೇಜಿನಲ್ಲಿ ಪ್ರಜಾವಾಣಿ ಮತ್ತು ಡೆಕ್ಕನ್ ಹೆರಾಲ್ಡ್ ವತಿಯಿಂದ ಭಾರತೀಯ ಕೈಗಾರಿಕೆಗಳ ಒಕ್ಕೂಟ ಹಾಗೂ ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಗಳ ಸಹಯೋಗದಲ್ಲಿ ದಿನಾಂಕ 15.2.2019ರಂದು "ಬಜೆಟ್ -2019" ಕುರಿತು ಸಂವಾದ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು.

ಕಾರ್ಯಕ್ರಮವನ್ನು ಆರ್ಥಿಕ ವಿಷಯ ತಜ್ಞರು, ಶಿಕ್ಷಣ ತಜ್ಞರು, ಕೈಗಾರಿಕೋದ್ಯಮಿಗಳು ಮತ್ತು ರೈತ

ಮುಖಂಡರು ಜೊತೆಗೂಡಿ ಉದ್ಘಾಟಿಸಿದರು.

ಸಂವಾದ ಕಾರ್ಯಕ್ರಮದಲ್ಲಿ ವಿದ್ಯಾರ್ಥಿಗಳೊಂದಿಗೆ ನಗರದ ಅನ್ನಪೂರ್ಣ ಶ್ರೀಕಾಂತ್ ಮತ್ತು ಅಸೋಸಿಯೆಟ್ಸ್ ಸಂಸ್ಥೆಯ ಲೆಕ್ಕಸನ್ನದುದಾರರಾದ ಶ್ರೀಮತಿ ಅನ್ನಪೂರ್ಣ ಶ್ರೀಕಾಂತ್, ಎಸ್‌ಡಿಎಂ ನಿರ್ವಹಣಾ ಅಭಿವೃದ್ಧಿ ಸಂಸ್ಥೆಯ ಸಹಾಯಕ ಪ್ರಾಧ್ಯಾಪಕರಾದ ಡಾ. ಎಂ. ಶ್ರೀರಾಮ್, ಲೆಕ್ಕಸನ್ನದುದಾರರಾದ ಶ್ರೀ ಎಸ್. ಅಚ್ಚುತ, ಮೈಸೂರು ವಿಶ್ವವಿದ್ಯಾನಿಲಯದ ರಾಜ್ಯಶಾಸ್ತ್ರ ವಿಭಾಗದ ಪ್ರಾಧ್ಯಾಪಕರಾದ ಡಾ. ಜಿ.ಟಿ. ರಾಮಚಂದ್ರಪ್ಪ, ಮೈಸೂರು ವಿಶ್ವವಿದ್ಯಾನಿಲಯದ ವಾಣಿಜ್ಯಶಾಸ್ತ್ರ ವಿಭಾಗದ ಪ್ರಾಧ್ಯಾಪಕಿ ಡಾ. ನವಿತಾ ತಿಮ್ಮಯ್ಯ, ಕರ್ನಾಟಕ ರಾಜ್ಯ ರೈತ ಸಂಘದ ಮುಖಂಡರಾದ ಶ್ರೀಬಸವರಾಜು, ಮೈಸೂರು ಬ್ಯೂರೋ ಡೆಕೆನ್ ಹೆರಾಲ್ಡ್ ಪತ್ರಿಕೆಯ ಸಂಪಾದಕರಾದ ಶ್ರೀ ಟಿ.ಎನ್. ಸತೀಶ್‌ಕುಮಾರ್ ಮತ್ತು ಮೈಸೂರು ಬ್ಯೂರೋ ಪ್ರಜಾವಾಣಿ ಪತ್ರಿಕೆಯ ಸಂಪಾದಕರಾದ ಶ್ರೀ ಕೆ.ಜೆ. ಮರಿಯಪ್ಪ ಭಾಗವಹಿಸಿದ್ದರು. ಜೆಎಸ್‌ಎಸ್ ಮಹಿಳಾ ಕಾಲೇಜಿನ ಪ್ರಾಂಶುಪಾಲರಾದ ಡಾ. ಕೆ.ವಿ. ಸುರೇಶ್‌ರವರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು.

## ಸುತ್ತೂರು ವಸತಿ ಶಾಲೆಯಲ್ಲಿ ಹುತಾತ್ಮ ಯೋಧರಿಗೆ ಶ್ರದ್ಧಾಂಜಲಿ

ಕಾಶ್ಮೀರದ ಪುಲ್ವಾಮಾ ಜಿಲ್ಲೆಯಲ್ಲಿ ಉಗ್ರರ ದಾಳಿಯಿಂದ ಇತ್ತೀಚೆಗೆ ಹುತಾತ್ಮರಾದ ವೀರ ಯೋಧರಿಗೆ ಸುತ್ತೂರಿನ ಜೆಎಸ್‌ಎಸ್ ವಸತಿ ಶಾಲೆಯ ನಾಲ್ಕು ಸಾವಿರಕ್ಕೂ ಹೆಚ್ಚು ಮಕ್ಕಳು ಶ್ರದ್ಧಾಂಜಲಿ ಸಲ್ಲಿಸಿದರು.

ಕಾರ್ಯಕ್ರಮದ ಮೊದಲಿಗೆ ಮಕ್ಕಳು ವೀರ ಯೋಧರ ಕುರಿತಾದ ಗೀತೆಗಳನ್ನು ಹಾಡಿದರು. ಸಂಸ್ಥೆಯ ಸಂಯೋಜನಾಧಿಕಾರಿ ಶ್ರೀ ಜಿ.ಎಲ್. ತ್ರಿಪುರಾಂತಕರವರು ಹುತಾತ್ಮರಾದ ದೇಶ ಕಾಯುವ ಯೋಧರ ತ್ಯಾಗ-ಬಲಿದಾನಗಳ ಕುರಿತು ಮಾತನಾಡಿದರು. ಅವರುಗಳ ಆತ್ಮಕ್ಕೆ ಶಾಂತಿ ಕೋರುವ ಮೂಲಕ ನುಡಿ ನಮನ ಅರ್ಪಿಸಿದರು. ಮೇಣದ ಬತ್ತಿ ಹಚ್ಚಿ ಮೌನಾಚರಣೆ ಮುಖಾಂತರ ವೀರ ಯೋಧರಿಗೆ ಶ್ರದ್ಧಾಂಜಲಿ ಅರ್ಪಿಸಿದರು. ಸಿ.ಆರ್.ಪಿ.ಎಫ್ ಹಾಗೂ ಅಶೋಕ ಚಕ್ರದ ವಿನ್ಯಾಸವನ್ನು ರಚಿಸಿ ಹುತಾತ್ಮರಿಗೆ ಗೌರವ ಸಲ್ಲಿಸಿದರು. ಈ ಸಂದರ್ಭದಲ್ಲಿ ಸಂಸ್ಥೆಯ ಮುಖ್ಯಸ್ಥರು ಹಾಗೂ ನೌಕರ ವರ್ಗದವರು ಹಾಜರಿದ್ದರು.

## ಜೆಎಸ್‌ಎಸ್ ಆಂಗ್ಲ ಮಾಧ್ಯಮ ಪ್ರೌಢಶಾಲೆ (ಬಾಲಜಗತ್), ಮೈಸೂರು

ದಿನಾಂಕ 2.2.2019ರಿಂದ 5.2.2019ರವರೆಗೆ ಸುತ್ತೂರು ಶ್ರೀಕ್ಷೇತ್ರದಲ್ಲಿ ಆದಿಜಗದ್ಗುರು ಶ್ರೀ ಶಿವರಾತ್ರಿ ಶಿವಯೋಗಿಗಳವರ ಜಾತ್ರಾ ಮಹೋತ್ಸವದ ಅಂಗವಾಗಿ ನಡೆದ ಸಾಂಸ್ಕೃತಿಕ ಸ್ಪರ್ಧೆಯ ಪ್ರಾಥಮಿಕ ವಿಭಾಗದಲ್ಲಿ 3ನೇ ತರಗತಿ ವಿದ್ಯಾರ್ಥಿನಿ ಎಸ್. ಯಾನಿಕಾ ಶಾಸ್ತ್ರೀಯ ಸಂಗೀತದಲ್ಲಿ ದ್ವಿತೀಯ ಬಹುಮಾನವನ್ನು ಹಾಗೂ ಲತಾ ಮತ್ತು ತಂಡದವರು ಶಾಸ್ತ್ರೀಯ ಸಮೂಹ ನೃತ್ಯದಲ್ಲಿ ತೃತೀಯ ಬಹುಮಾನವನ್ನು ಪಡೆದಿರುತ್ತಾರೆ.



ಪ್ರೌಢಶಾಲಾವಿಭಾಗದಿಂದ ಎಸ್. ಶಶಿಕಲಾ ವಚನಾಧಾರಿತ ನೃತ್ಯದಲ್ಲಿ ನಾಲ್ಕನೇ ಬಹುಮಾನ ವರ್ಷ

ಶಾಸ್ತ್ರೀಯ ನೃತ್ಯದಲ್ಲಿ ತೃತೀಯ ಬಹುಮಾನ ಹಾಗೂ ಎಸ್. ಶಶಿಕಲಾ ಮತ್ತುತಂಡದವರು ಶಾಸ್ತ್ರೀಯ ಸಮೂಹ ನೃತ್ಯದಲ್ಲಿ ಪ್ರಥಮ ಸ್ಥಾನವನ್ನು ಪಡೆದಿರುತ್ತಾರೆ. ಚೌಕಬಾರ್‌ದಲ್ಲಿ 9ನೇ ತರಗತಿ ವಿದ್ಯಾರ್ಥಿ ನಿರಂಜನ ಪ್ರಥಮ ಸ್ಥಾನ ಪಡೆದಿರುತ್ತಾನೆ.

### ಸಂವಾದ

ದಿನಾಂಕ 19.1.2019ರಂದು ಸಿಎಂಸಿಎ ವತಿಯಿಂದ ಸ್ವಚ್ಛತೆಯ ಕುರಿತಾದ ಕಾರ್ಯಕ್ರಮವನ್ನು ಆಯೋಜಿಸಲಾಗಿತ್ತು. ನಗರ ಪಾಲಿಕೆ ಸದಸ್ಯರಾದ ಶ್ರೀ ಬಿ.ವಿ. ಮಂಜುನಾಥ್‌ರವರು ಕಾರ್ಯಕ್ರಮದಲ್ಲಿ



ಭಾಗವಹಿಸಿ ವಿದ್ಯಾರ್ಥಿಗಳೊಂದಿಗೆ ಸಂವಾದ ನಡೆಸಿ ಸ್ವಚ್ಛತೆಯ ಬಗ್ಗೆ ಅರಿವು ಮೂಡಿಸಿದರು. ಕಾರ್ಯಕ್ರಮದಲ್ಲಿ ಸಿಎಂಸಿಎ ಶಿಕ್ಷಕರು, ಮುಖ್ಯೋಪಾಧ್ಯಾಯರು, ಶಾಲೆಯ ಶಿಕ್ಷಕರು ಮತ್ತು ವಿದ್ಯಾರ್ಥಿಗಳು ಉಪಸ್ಥಿತರಿದ್ದರು.

### ಜೆ.ಪಿ. ನಗರದ ಜೆಎಸ್‌ಎಸ್ ಪಬ್ಲಿಕ್ ಶಾಲೆಗೆ ಪರ್ಯಾಯ ಪಾರಿತೋಷಕ

ಸುತ್ತೂರಿನಲ್ಲಿ ನಡೆದ ಆದಿಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಜಾತ್ರಾ ಮಹೋತ್ಸವದ ಜೆಎಸ್‌ಎಸ್ ಅಂತರ್‌ಶಾಲಾ ಸಾಂಸ್ಕೃತಿಕ ಸ್ಪರ್ಧೆಯಲ್ಲಿ ಜೆ.ಪಿ.ನಗರದ ಜೆಎಸ್‌ಎಸ್ ಪಬ್ಲಿಕ್ ಶಾಲೆಯ ಪ್ರಾಥಮಿಕ ಹಾಗೂ ಪ್ರೌಢಶಾಲಾ ವಿಭಾಗದ ವಿದ್ಯಾರ್ಥಿನಿಯರು ನೃತ್ಯ ಸ್ಪರ್ಧೆ ಹಾಗೂ ಸಮೂಹಗಾಯನ ಸ್ಪರ್ಧೆಯಲ್ಲಿ ಪರ್ಯಾಯ ಪಾರಿತೋಷಕ ಪಡೆದಿದ್ದಾರೆ.

ಪ್ರಾಥಮಿಕ ಶಾಲಾ ವಿಭಾಗದ ಗುಂಪು ಸ್ಪರ್ಧೆಯ ಸಮೂಹ ಶಾಸ್ತ್ರೀಯ ನೃತ್ಯದಲ್ಲಿ ಪ್ರಥಮ, ಸಮೂಹ ನೃತ್ಯದಲ್ಲಿ ನಾಲ್ಕನೇ, ಏಕವ್ಯಕ್ತಿಸ್ಪರ್ಧೆಯಲ್ಲಿ ವಚನ ನೃತ್ಯದಲ್ಲಿ ಅನಘ ದ್ವಿತೀಯ, ಶಾಸ್ತ್ರೀಯ ನೃತ್ಯದಲ್ಲಿ ದೀಕ್ಷಾ ಜಿ. ರಾವ್ ನಾಲ್ಕನೇ ಬಹುಮಾನವನ್ನು ಪಡೆದಿದ್ದಾರೆ.

ಪ್ರೌಢಶಾಲಾ ವಿಭಾಗದ ಗುಂಪು ಸ್ಪರ್ಧೆಯ ಸಮೂಹ ಶಾಸ್ತ್ರೀಯ ನೃತ್ಯದಲ್ಲಿ ಪ್ರಥಮ, ಸಮೂಹ ಗಾಯನದಲ್ಲಿ ನಾಲ್ಕನೇ ಬಹುಮಾನವನ್ನು, ಶಾಸ್ತ್ರೀಯ ನೃತ್ಯದಲ್ಲಿ ಸಂಧ್ಯಾದತ್ ಪ್ರಥಮ, ಏಕವ್ಯಕ್ತಿ ಸ್ಪರ್ಧೆಯ ವಚನ ನೃತ್ಯದಲ್ಲಿ ಈ ವೇದಿಕ, ತೃತೀಯ ಬಹುಮಾನ ಪಡೆದಿದ್ದಾರೆ.

### ರಾಷ್ಟ್ರ ಮಟ್ಟದ ಕರಾಟೆ ಪಂದ್ಯಾವಳಿ

ದಿನಾಂಕ 18.1.2019ರಂದು ಮೈಸೂರಿನ ಚಾಮುಂಡಿ ವಿಹಾರ್ ಒಳಾಂಗಣ ಕ್ರೀಡಾಂಗಣದಲ್ಲಿ ಸ್ಟೂಡೆಂಟ್ಸ್ ಗೇಮ್ಸ್ ಫೆಡರೇಷನ್ ರವರು ನಡೆಸಿದ ಮೊದಲ ರಾಷ್ಟ್ರಮಟ್ಟದ ಕರಾಟೆ ಪಂದ್ಯಾವಳಿಯಲ್ಲಿ **ಬಾಗೆಯ ಜೆಎಸ್‌ಎಸ್ ಪಬ್ಲಿಕ್ ಶಾಲೆಯ** ಕರಾಟೆ ಮುಖ್ಯ ಶಿಕ್ಷಕರಾದ ಶ್ರೀ ಸೆನ್‌ಸಾಯ್ ರಾಜೇಂದ್ರನ್ ಅವರಲ್ಲಿ ತರಬೇತಿ ಪಡೆದ ಸುಮಾರು 23 ವಿದ್ಯಾರ್ಥಿಗಳು ಭಾಗವಹಿಸಿದ್ದರು. 5 ಚಿನ್ನದ ಪದಕ, 14 ಬೆಳ್ಳಿಯ ಪದಕ ಮತ್ತು 21 ಕಂಚಿನ ಪದಕಗಳನ್ನು ವಿದ್ಯಾರ್ಥಿಗಳು

ಪಡೆದಿರುತ್ತಾರೆ. ಒಟ್ಟು 40 ಪ್ರಶಸ್ತಿಗಳು ಶಾಲೆಗೆ ಲಭಿಸಿರುತ್ತವೆ.

ಬ್ಲಾಕ್ ಬೆಲ್ಟ್ ವಿಭಾಗದಲ್ಲಿ ಶ್ರೇಯಸ್ ಖಂಡಿಗೆ, ಚೇತನ್, ಪ್ರಣವ್ ಆರ್. ಕಿರಣ್, ಬಿ.ಎ. ಮಾನ್ಯ, ಅನ್ವಿತ ಡೇವಿಡ್, ಕಲರ್ ಬೆಲ್ಟ್ ವಿಭಾಗದಲ್ಲಿ, ಪ್ರಜಸ್ ಆರ್. ಕಿರಣ್, ಅಮ್ಮುಮನ್ ಖಂಡಿಗೆ, ಪ್ರವೀಣ್ ಸೋಲಯ್, ರಿತ್‌ವಿಕ್ ರೈಯ್, ಆಕಾಶ್, ಪ್ರಣವ್, ಆರುಶ್, ನಿತಿನ್ ಕುಮಾರ್, ಪೂರ್ಣೇಶ್, ಸೈಯದ್ ಸಮೀರ್, ಎಸ್. ಕೃತಿಕ, ಎಚ್.ಕೆ. ಮನೋಜ್, ಎಚ್.ಕೆ. ಧನುಶ್, ಸೈದ ಸಿಮ್ರನ್, ಸೈದ ಸೂಫಿಯಾ, ಸಿ.ವೈ. ತೈನಿಷಾ, ತೇಜಸ್ವಿ ಕಿಶೋರ್, ಮಹೇಶ್ ರೆಡ್ಡಿ ಈ ವಿದ್ಯಾರ್ಥಿಗಳು ಪ್ರಶಸ್ತಿ ಪಡೆದಿದ್ದಾರೆ.

## ಜೆಎಸ್‌ಎಸ್ ಆಸ್ಪತ್ರೆ, ಚಾಮರಾಜನಗರ

ದಿನಾಂಕ 4.1.2019ರಿಂದ ಮತ್ತು 7.1.2019ರವರೆಗೆ ಮೂರು ದಿನಗಳ ಕಾಲ ಚಾಮರಾಜನಗರದ ಜೆಎಸ್‌ಎಸ್ ಆಸ್ಪತ್ರೆ ವತಿಯಿಂದ ಜೆಎಸ್‌ಎಸ್ ಮಹಿಳಾ ಕಾಲೇಜಿನ 1099 ವಿದ್ಯಾರ್ಥಿಯನಿಯರಿಗೆ ಆರೋಗ್ಯ ತಪಾಸಣೆ ಮಾಡಲಾಯಿತು. ದಿನಾಂಕ 18.1.2019 ರಿಂದ 24.1.2019ರವರೆಗೆ 5 ದಿನಗಳು ಜೆಎಸ್‌ಎಸ್ ಪಬ್ಲಿಕ್ ಶಾಲೆಯ 389 ವಿದ್ಯಾರ್ಥಿಗಳಿಗೆ ಆರೋಗ್ಯ ತಪಾಸಣೆ ಮಾಡಿ ಚಿಕಿತ್ಸೆಯನ್ನು ನೀಡಲಾಯಿತು. ಡಾ. ಚಂದ್ರಶೇಖರನ್, ಡಾ. ಟಿ.ಪಿ. ರವೀಶ್, ಡಾ. ಮಂಜುನಾಥ್ ರವರು ತಪಾಸಣೆ ಮಾಡಿ ಚಿಕಿತ್ಸೆ ನೀಡಿದರು.

ದಿನಾಂಕ 24.1.2019ರಂದು ಚಾಮರಾಜನಗರದ ಜೆಎಸ್‌ಎಸ್ ಆಸ್ಪತ್ರೆಯ ವರ್ತಕರ ಸಂಘದ ವತಿಯಿಂದ ಸಸಿ ನೆಡುವ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಕರ್ನಾಟಕ ರಾಜ್ಯ ಸಂಯುಕ್ತ ಸಹಕಾರಿ ನಿಗಮದ ರಾಜ್ಯ ಅಧ್ಯಕ್ಷರಾದ ಶ್ರೀ ಕೃಷ್ಣರೆಡ್ಡಿ, ಸಿದ್ದಮಲ್ಲೇಶ್ವರ ಸೌಹಾರ್ದ ಸಹಕಾರಿ ನಿಗಮದ ಅಧ್ಯಕ್ಷರಾದ ರಾಮಸಮುದ್ರ ಬಾಬು, ವರ್ತಕರ ಸೌಹಾರ್ದ ಸಹಕಾರಿ ನಿಗಮದ ಅಧ್ಯಕ್ಷರಾದ ಶ್ರೀ ಬಾಲಸುಬ್ರಹ್ಮಣ್ಯ ಮತ್ತು ಸಂಘದ ಸದಸ್ಯರುಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ದಿನಾಂಕ 24.1.2019ರಂದು ಕರ್ನಾಟಕ ರಾಜ್ಯ ಸೌಹಾರ್ದ ಸಂಯುಕ್ತ ಸಹಕಾರಿ ನಿ. ಜೆಎಸ್‌ಎಸ್ ಆಸ್ಪತ್ರೆ ಮತ್ತು ಔಷಧಿ ಮಾರಾಟಗಾರರ ಸಂಘ ಮತ್ತು ಭಾರತ ವಿಕಾಸ್ ಪರಿಷದ್ ಇವರ ಸಂಯುಕ್ತಾಶ್ರಯದಲ್ಲಿ ಚಾಮರಾಜನಗರದ ವರ್ತಕರ ಭವನದಲ್ಲಿ ಉಚಿತ ಆರೋಗ್ಯ ತಪಾಸಣಾ ಶಿಬಿರ ಮತ್ತು ರಕ್ತದಾನ ಶಿಬಿರವನ್ನು ಏರ್ಪಡಿಸಲಾಗಿತ್ತು. ಆಸ್ಪತ್ರೆಯ ವೈದ್ಯರುಗಳು ಮತ್ತು ಸಿಬ್ಬಂದಿ ವರ್ಗದವರು ಶಿಬಿರದಲ್ಲಿ ಭಾಗವಹಿಸಿ ನೋಂದಾಯಿಸಿಕೊಂಡ 80 ಮಂದಿಗೆ ಆರೋಗ್ಯ ತಪಾಸಣೆ, ಚಿಕಿತ್ಸೆ ನೀಡಿದರು. ಔಷಧಿಗಳನ್ನು ಉಚಿತವಾಗಿ ವಿತರಿಸಲಾಯಿತು.

## ಶಾಲಾ ವಾರ್ಷಿಕೋತ್ಸವ

**ಮಂಡ್ಯದ ಜೆಎಸ್‌ಎಸ್ ಪಬ್ಲಿಕ್ ಶಾಲೆಯಲ್ಲಿ** ದಿನಾಂಕ 10.1.2019ರಂದು ಶಾಲಾ ವಾರ್ಷಿಕೋತ್ಸವವನ್ನು ಆಚರಿಸಲಾಯಿತು. ಸಮಾರಂಭಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಮಂಡ್ಯ ವಿಧಾನಸಭಾ ಸದಸ್ಯರಾದ ಶ್ರೀ ಎಂ. ಶ್ರೀನಿವಾಸ್‌ರವರು ಶ್ರೀಮಠವು ಶಿಕ್ಷಣಕ್ಷೇತ್ರಕ್ಕೆ ನೀಡಿದ ಕೊಡುಗೆಗಳನ್ನು ಸ್ಮರಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಜೆಎಸ್‌ಎಸ್ ಮಹಾವಿದ್ಯಾಪೀಠದ ಪಬ್ಲಿಕ್ ಶಾಲಾ ವಿಭಾಗದ ನಿರ್ದೇಶಕರಾದ ಶ್ರೀ ಶ್ರೀನಿವಾಸ್ ಅಯ್ಯಂಗಾರ್‌ರವರು ಮಾತನಾಡಿ ವಿದ್ಯಾಭ್ಯಾಸದ ಜೊತೆಯಲ್ಲಿ ಪಠ್ಯೇತರ ಚಟುವಟಿಕೆಗಳ ಪ್ರಾಮುಖ್ಯತೆ ಬಗ್ಗೆ ತಿಳಿಸಿದರು.

ಶಾಲೆಯಲ್ಲಿ ನಡೆದಂತಹ ಹಲವು ಚಟುವಟಿಕೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನವನ್ನು ವಿತರಿಸಲಾಯಿತು.

ಕಾರ್ಯಕ್ರಮವನ್ನು ಪ್ರಾರ್ಥನಾ ಗೀತೆ ಮತ್ತು ಜ್ಯೋತಿ ಬೆಳಗಿಸುವುದರೊಂದಿಗೆ ಆರಂಭಿಸಲಾಯಿತು. ಶ್ರೀಮತಿ ಸುಷ್ಮಾರವರು ಸ್ವಾಗತಿಸಿದರು. ಶಾಲೆಯ ಪ್ರಾಂಶುಪಾಲರಾದ ಶ್ರೀ ಕುಮಾರಸ್ವಾಮಿಯವರು ಶಾಲೆಯ ವಾರ್ಷಿಕ ವರದಿಯನ್ನು ಓದಿದರು.

## ಸುತ್ತೂರಿನ ಜೆಎಸ್‌ಎಸ್ ಪ್ರೌಢಶಾಲೆಯ ಎನ್.ಸಿ.ಸಿ. ಭೂದಳಕ್ಕೆ ಬೆಸ್ಟ್ ಇನ್‌ಸ್ಟಿಟ್ಯೂಷನ್ ಅವಾರ್ಡ್

**ಸುತ್ತೂರಿನ ಜೆಎಸ್‌ಎಸ್ ಪ್ರೌಢಶಾಲೆಯ** ಎನ್.ಸಿ.ಸಿ. ಭೂದಳವು 2004ರಲ್ಲಿ ಪ್ರಾರಂಭವಾಗಿದ್ದು ಇಲ್ಲಿ ಪ್ರತಿ ವರ್ಷ100ಕೆಡೆಟ್‌ಗಳು ತರಬೇತಿಯನ್ನು ಪಡೆಯುತ್ತಿದ್ದಾರೆ. ಎನ್‌ಸಿಸಿ ವತಿಯಿಂದ ಏರ್ಪಡಿಸಿರುವ ಅನೇಕ ಶಿಬಿರಗಳಲ್ಲಿ ಭಾಗವಹಿಸಿ ಕವಾಯತ್, ಗಾಯನ, ನೃತ್ಯ, ಆಟೋಟ, ಫೈರಿಂಗ್ ಮುಂತಾದ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡು ಸಮಗ್ರ ಬಹುಮಾನಗಳನ್ನು ಪಡೆದಿದ್ದಾರೆ. ಹಲವಾರು ಕೆಡೆಟ್‌ಗಳು ತಾಲ್ ಸೈನಿಕ, ಗಣರಾಜ್ಯೋತ್ಸವ, ಟ್ರೆಕ್ಕಿಂಗ್, ಬೇಸಿಕ್ ಲೀಡರ್ ಶಿಪ್ ಶಿಬಿರಗಳಲ್ಲಿ ಭಾಗವಹಿಸಿ ಅನೇಕ ಬಹುಮಾನಗಳನ್ನು ಪಡೆದು ಶಾಲೆಯ ಕೀರ್ತಿಯನ್ನು ಹೆಚ್ಚಿಸಿದ್ದಾರೆ. ಇದನ್ನು ಪರಿಗಣಿಸಿ ಎನ್‌ಸಿಸಿ ಕರ್ನಾಟಕ ಮತ್ತು ಗೋವಾ ವತಿಯಿಂದ ನೀಡುವ ಅತ್ಯುತ್ತಮ ಸಂಸ್ಥೆ ಪ್ರಶಸ್ತಿಯನ್ನು ಈ ವರ್ಷ ತನ್ನದಾಗಿಸಿಕೊಂಡಿದೆ. ಬೆಂಗಳೂರಿನ ಮೌಂಟ್ ಕಾರ್ಮೆಲ್ ಕಾಲೇಜಿನಲ್ಲಿ 4.2.2019ರಂದು ಏರ್ಪಡಿಸಿದ್ದ ಸಮಾರಂಭದಲ್ಲಿ ಮೊದಲನೇ ಬೆಸ್ಟ್ ಇನ್‌ಸ್ಟಿಟ್ಯೂಷನ್ ಅವಾರ್ಡನ್ನು ಡೆಪ್ಯೂಟಿ ಡೈರೆಕ್ಟರ್ ಆಫ್ ಜನರಲ್ ಬ್ರಿಗೇಡಿಯರ್ ಡಿ.ಎಂ. ಪೂರ್ವಿಕ್ ರವರು ಪ್ರದಾನ ಮಾಡಿದರು. ದಿನಾಂಕ 8.2.019ರಂದು ಮೈಸೂರಿನ ಮಹಾರಾಜ ಕಾಲೇಜಿನಲ್ಲಿ ಏರ್ಪಡಿಸಿದ್ದ ಸಮಾರಂಭದಲ್ಲಿ 13ನೇ ಕರ್ನಾಟಕ ಎನ್.ಸಿ.ಸಿ. ಬೆಟಾಲಿಯನ್ನಿನ ಕಮಾಂಡಿಂಗ್ ಆಫೀಸರ್ ಕರ್ನಲ್ ಮಂಜಿತ್‌ಸಿಂಗ್‌ದಡ್ಡ ಹಾಗೂ ಕರ್ನಲ್ ಜಗದೀಶ್‌ನಾಯರ್ ಇವರಿಂದ ಬೆಸ್ಟ್ ಇನ್‌ಸ್ಟಿಟ್ಯೂಷನ್ ಅವಾರ್ಡನ್ನು ಎನ್.ಸಿ.ಸಿ. ಭೂದಳದ ಅಧಿಕಾರಿಯಾದ ಶ್ರೀಮತಿ ಸಿ.ಪಿ. ನಿರ್ಮಲ ರವರು ಪಡೆದುಕೊಂಡಿದ್ದಾರೆ. ಶಾಲೆಯ ಭೂದಳ ಘಟಕಕ್ಕೆ ಸತತ ನಾಲ್ಕನೇ ಬಾರಿ ಬೆಸ್ಟ್ ಇನ್‌ಸ್ಟಿಟ್ಯೂಷನ್ ಅವಾರ್ಡ್ ಲಭಿಸಿರುವುದು ಅಭಿನಂದನಾರ್ಹ. ಈ ಸಾಧನೆಯನ್ನು ಸಂಸ್ಥೆಯ ಆಡಳಿತಾಧಿಕಾರಿಗಳು, ಸಂಯೋಜನಾಧಿಕಾರಿ ಗಳು, ಮುಖ್ಯಸ್ಥರು ಅಭಿನಂದಿಸಿದ್ದಾರೆ.

## ಜೆಎಸ್‌ಎಸ್ ಪ್ರೌಢಶಾಲೆ, ದೇವಲಾಪುರ

ದಿನಾಂಕ 1.2.2019 ರಿಂದ 6.2.2019ರವರೆಗೆ ಸುತ್ತೂರು ಶ್ರೀಕ್ಷೇತ್ರದಲ್ಲಿ ನಡೆದ ಜಾತ್ರಾ ಮಹೋತ್ಸವದ ವಸ್ತು ಪ್ರದರ್ಶನದ ಶೈಕ್ಷಣಿಕ ವಿಭಾಗದಲ್ಲಿ ಹತ್ತನೆಯ ತರಗತಿ ವಿದ್ಯಾರ್ಥಿನಿಯರಾದ ಕು. ಟಿ. ನಂದಿನಿ ಮತ್ತು ಕು. ಎ.ಜೆ. ರಕ್ಷಿತಾ ರವರುಗಳು ಭಾಷಾ ವಿಭಾಗದಲ್ಲಿ ಪ್ರದರ್ಶಿಸಿದ 'ಕನ್ನಡ ವರ್ಣಮಾಲೆಯ ಕಲಿಕೆ' ವಿಷಯ ಕುರಿತ ಮಾದರಿಗೆ ಪ್ರಥಮ ಬಹುಮಾನ ಲಭಿಸಿದೆ.

ದಿನಾಂಕ 29.1.2019ರಂದು ವಿದ್ಯಾರ್ಥಿಸಂಘದ ಸಮಾರೋಪ ಸಮಾರಂಭವು ದೇವಲಾಪುರದ ಶ್ರೀ ಗುರುಮಲ್ಲೇಶ್ವರ ದಾಸೋಹ ಮಠದ ಶ್ರೀ ಜಡೇಸ್ವಾಮಿಗಳವರ ಸಮ್ಮುಖದಲ್ಲಿ ನಡೆಯಿತು. ಮುಖ್ಯೋಪಾಧ್ಯಾಯರಾದ ಶ್ರೀ ಜಿ.ಪಿ. ನಂಜುಂಡಸ್ವಾಮಿಯವರು ಅಧ್ಯಕ್ಷತೆ ವಹಿಸಿದ್ದರು. ಕಾಲೇಜಿನ ಪ್ರಾಂಶುಪಾಲರಾದ ಶ್ರೀ ಎಚ್.ಪಿ. ಶಿವಾನಂದರವರು ಆಟೋಟಗಳಲ್ಲಿ ವಿಜೇತರಾದವರಿಗೆ

ಬಹುಮಾನ ವಿತರಣೆ ಮಾಡಿದರು. ನಂಜನಗೂಡು ತಾಲ್ಲೂಕಿನ ಸೂರಳ್ಳಿ ಗ್ರಾಮದ ಸರ್ಕಾರಿ ಹಿರಿಯ ಪ್ರಾಥಮಿಯ ಶಾಲೆಯ ಮುಖ್ಯಶಿಕ್ಷಕರು ಹಾಗೂ ಕಲಾವಿದರೂ ಆದ ಶ್ರೀ ಎ.ಪಿ. ನಟರಾಜುರವರನ್ನು ಈ ಸಂದರ್ಭದಲ್ಲಿ ಗೌರವಿಸಲಾಯಿತು. ವಿದ್ಯಾರ್ಥಿಗಳು ಸಾಂಸ್ಕೃತಿಕ ಕಾರ್ಯಕ್ರಮ ನಡೆಸಿಕೊಟ್ಟರು. ವಿಶೇಷವಾಗಿ 9ನೆಯ ತರಗತಿ ವಿದ್ಯಾರ್ಥಿಗಳು 'ಪ್ರಾಯಶ್ಚಿತ್ತ' ಎಂಬ ನಾಟಕ ಪ್ರದರ್ಶಿಸಿದರು.

## ಬೈಸಿಕಲ್ ವಿತರಣೆ

**ಚಾಮರಾಜನಗರ ಜಿಲ್ಲೆ ಯಳಂದೂರು ತಾಲ್ಲೂಕು ಗೌಡಹಳ್ಳಿಯ ಜೆಎಸ್‌ಎಸ್ ಪ್ರೌಢಶಾಲೆಯಲ್ಲಿ** ದಿನಾಂಕ 9.2.2019ರಂದು 8ನೇ ತರಗತಿ ವಿದ್ಯಾರ್ಥಿಗಳಿಗೆ ಉಚಿತ ಬೈಸಿಕಲ್ ವಿತರಣಾ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಗೌಡಹಳ್ಳಿ ಗ್ರಾಮ ಪಂಚಾಯಿತಿಯ ಅಧ್ಯಕ್ಷರಾದ ಶ್ರೀ ಎಲ್. ಮಹೇಶ್ ರವರು, ಮಾಜಿ ಗ್ರಾಮ ಪಂಚಾಯಿತಿ ಅಧ್ಯಕ್ಷರಾದ ಶ್ರೀ ರವಿ ಗ್ರಾಮ ಪಂಚಾಯಿತಿ ಸದಸ್ಯರಾದ ಸೋಮಶೇಖರ, ಶ್ರೀಮತಿ ಪುಟ್ಟತಾಯಮ್ಮ ಹಾಗೂ ಮುಖ್ಯಸ್ಥರು, ಸಿಬ್ಬಂದಿವರ್ಗ, ಪೋಷಕರು, ವಿದ್ಯಾರ್ಥಿಗಳು ಹಾಜರಿದ್ದರು.

## ವಿಶೇಷ ಉಪನ್ಯಾಸ

**ಗುಂಡ್ಲುಪೇಟೆಯ ಜೆಎಸ್‌ಎಸ್ ಕಲಾ ಮತ್ತು ವಾಣಿಜ್ಯ ಕಾಲೇಜಿನಲ್ಲಿ** ದಿನಾಂಕ 24.1.2019ರಂದು ಆಂಗ್ಲಭಾಷಾ ವಿಭಾಗದ ವತಿಯಿಂದ ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ತೆರಕಣಾಂಬಿಯ ಸರ್ಕಾರಿ ಪ್ರಥಮದರ್ಜೆ ಕಾಲೇಜಿನ ಪ್ರಾಂಶುಪಾಲರಾದ ಪ್ರೊ. ಗೋವಿಂದರಾಜು ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿ ನೀಡ್ ಆಫ್ ಕಮ್ಯುನಿಕೇಟಿವ್ ಸ್ಕಿಲ್ ಇನ್ ಇಂಗ್ಲಿಷ್ ಎಂಬ ವಿಷಯ ಕುರಿತು ವಿಶೇಷ ಉಪನ್ಯಾಸ ನೀಡಿದರು.

ದಿನಾಂಕ 25.1.2019ರಂದು 'ರಾಷ್ಟ್ರೀಯ ಮತದಾರರ ದಿನಾಚರಣೆ'ಯನ್ನು ಆಚರಿಸಲಾಯಿತು. ಈ ಸಮಾರಂಭಕ್ಕೆ ಗುಂಡ್ಲುಪೇಟೆ ಗೌತಮ ಪ್ರಥಮದರ್ಜೆ ಕಾಲೇಜಿನ ರಾಜ್ಯಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಶ್ರೀ ಎಲ್. ರೇವಣ್ಣನವರು ಸಂಪನ್ಮೂಲ ವ್ಯಕ್ತಿಯಾಗಿ ಆಗಮಿಸಿ ರಾಷ್ಟ್ರೀಯ ಮತದಾರರ ದಿನಾಚರಣೆಯ ಪ್ರತಿಜ್ಞಾನಿಧಿಯನ್ನು ವಿದ್ಯಾರ್ಥಿಗಳಿಗೆ ಬೋಧಿಸಿದರು. "ಮತದಾನದ ಬಗ್ಗೆ ಹೆಚ್ಚು ಅರಿವು ಇರಬೇಕು. ಆಗ ಮಾತ್ರ ಪ್ರಜಾಪ್ರಭುತ್ವ ಯಶಸ್ವಿಯಾಗುತ್ತದೆ. ಜೊತೆಗೆ ರಾಷ್ಟ್ರವು ಅಭಿವೃದ್ಧಿ ಹೊಂದುತ್ತದೆ. ಸಮರ್ಥ ಸರ್ಕಾರವನ್ನು ರಚಿಸಲು ಸಾಧ್ಯವಾಗುತ್ತದೆ" ಎಂದು ತಿಳಿಸಿದರು. ಸಮಾರಂಭದ ಅಧ್ಯಕ್ಷತೆಯನ್ನು ಆಂಗ್ಲಭಾಷಾ ವಿಭಾಗದ ಮುಖ್ಯಸ್ಥರಾದ ಶ್ರೀ ಸಿ.ಎಸ್. ಹೊನ್ನೇಗೌಡರು ವಹಿಸಿದ್ದರು.

ದಿನಾಂಕ 12 ಮತ್ತು 13 ಫೆಬ್ರವರಿ 2019 ರಂದು ಮಂಗಳೂರಿನಲ್ಲಿ ಫಿಜಿಯೋಥೆರಪಿ ಕಾಲೇಜುಗಳ ಕ್ರಿಕೆಟ್ ಪಂದ್ಯಾವಳಿಯನ್ನು ಆಯೋಜಿಸಲಾಗಿತ್ತು ಇದರಲ್ಲಿ ಮೈಸೂರಿನ ಎಂ.ಜಿ. ರಸ್ತೆಯಲ್ಲಿರುವ ಜೆಎಸ್‌ಎಸ್ ಫಿಸಿಯೋಥೆರಪಿ ಕಾಲೇಜಿನ ವಿದ್ಯಾರ್ಥಿಗಳು ಭಾಗವಹಿಸಿ ಪ್ರಥಮ ಸ್ಥಾನ ಗಳಿಸಿ ಟ್ರೋಫಿಯನ್ನು ಪಡೆದಿರುತ್ತಾರೆ.

## ಮನೆಮದ್ದು ಕಾರ್ಯಕ್ರಮ

ಮರಿಯಾಲದ ಜೆಎಸ್‌ಎಸ್ ರುಡ್‌ಸೆಟ್ ಸಂಸ್ಥೆ ಮತ್ತು ಕರ್ನಾಟಕ ಸರ್ಕಾರದ ಚಾಮರಾಜನಗರ ಜಿಲ್ಲಾ ಆಯುಷ್ ಇಲಾಖೆ, ಪರಿಶಿಷ್ಟ ವರ್ಗದ ಸೋಲಿಗರ ಅಭಿವೃದ್ಧಿ ಸಂಘದ ವತಿಯಿಂದ ದಿನಾಂಕ 21.2.2019ರಂದು ಮನೆಮುದ್ದು ಕಾರ್ಯಕ್ರಮವನ್ನು

ಏರ್ಪಡಿಸಲಾಗಿತ್ತು.

ಕಾರ್ಯಕ್ರಮವನ್ನು ಉದ್ಘಾಟನೆ ಮಾಡಿದ ಜೆಎಸ್‌ಎಸ್ ರುಡ್‌ಸೆಟ್ ಸಂಸ್ಥೆಯ ನಿರ್ದೇಶಕರಾದ ಶ್ರೀ ಕೆ. ಚಂದ್ರಶೇಖರ್‌ರವರು ಮಾತನಾಡಿ ಜಿಲ್ಲೆಯಲ್ಲಿ ಆಯುಷ್ ಇಲಾಖೆಯ ಕಾರ್ಯಕ್ರಮಗಳಲ್ಲಿ ಆಸ್ಪತ್ರೆಗಳಲ್ಲಿ ಔಷಧೋಪಚಾರದ ಜೊತೆಗೆ ಅರಿವು ಕಾರ್ಯಕ್ರಮಗಳನ್ನು ನಡೆಸುತ್ತಿವೆ. ಸ್ಥಳೀಯವಾಗಿ ಸಿಗುವ ಆರೋಗ್ಯಕರ ಉತ್ಪನ್ನಗಳನ್ನು ಬಳಸಬೇಕು. ಆರೋಗ್ಯವಾಗಿದ್ದರೆ ಜೀವನದಲ್ಲಿ ಯಶಸ್ಸನ್ನು ಕಾಣಬಹುದು. ಕಾಡಿನಲ್ಲಿ ದೊರುಕುವ ಸೊಪ್ಪು, ಹಣ್ಣು, ಜೇನು ಬಳಸಬೇಕು. ಒಳ್ಳೆಯ ವಾತಾವಾರಣವನ್ನು ನಿರ್ಮಿಸಿಕೊಂಡು ಉತ್ತಮ ಬದುಕನ್ನು ಕಾಣಬೇಕು" ಎಂದರು.

ಡಾ. ಶ್ರೀ ನಿವಾಸ್ ತೊಡಬಾಳ್‌ರವರು ಮಾತನಾಡಿ "ಗ್ರಾಮೀಣ ಪ್ರದೇಶದಲ್ಲಿ ದೊರಕುವ ಬೆಟ್ಟದ ನೆಲ್ಲಿ, ಕಬ್ಬು, ರಾಗಿ, ಬೇಳೆ, ಪರಂಗಿ, ಹಲಸು ಮುಂತಾದವುಗಳನ್ನು, ಕಾಲಕ್ಕೆ ಸಿಗುವ ಪದಾರ್ಥಗಳನ್ನು ಬಳಸಬೇಕು. ರಾಸಾಯನಿಕ ವಸ್ತುಗಳನ್ನು ಬಳಸದೆ ಬೆಳೆದಿರುವ ಆಹಾರ ಪದಾರ್ಥಗಳನ್ನು ಬಳಸಬೇಕು" ಎಂದರು.

ಎರಡನೇ ಅಧಿವೇಶನದಲ್ಲಿ ಡಾ. ಶೋಭಾರವರು ತೊಳಸಿ, ಬೇವು, ದಾಸವಾಳ, ಬೆಳ್ಳುಳ್ಳಿ, ಈರುಳ್ಳಿ, ನಿಂಬೆಗಳ ಮುಹತ್ವವನ್ನು ತಿಳಿಸಿದರು. ಮೂರನೇ ಅಧಿವೇಶನದಲ್ಲಿ ಡಾ. ಸುಧಾ ರವರು ಮಹಿಳೆಯರಿಗೆ ಸಂಬಂಧಿಸಿದಂತೆ ಇರುವ ಕಾಯಿಲೆಗಳ ಬಗ್ಗೆ ಚರ್ಚಿಸಿದರು.

ಗೊರುಗೊರುಕ ಗೊರುಕನ ದೊಡ್ಡ ಸಂಪಿಗೆ ನನ್ನೊಡೆಯ ಗೀತೆಯಿಂದ ಕಾರ್ಯಕ್ರಮ ಪ್ರಾರಂಭವಾಯಿತು. ಪುಣಜನೂರಿನ ಮಹಿಳೆಯರ ಜೀವನ ಕ್ರಮವನ್ನು ಬಾನವಾಡಿ ಚಿತ್ರಕಲಾ, ಬೇಡಗುಳಿಯ ಪುಷ್ಪ, ಪೋಡಿನ ಭಾಗ್ಯಶ್ರೀ ವಿವರಿಸಿದರು. ಕಾರ್ಯಕ್ರಮದಲ್ಲಿ ಸೋಲಿಗರ ಅಭಿವೃದ್ಧಿ ಸಂಘದ ಶ್ರೀ ನಂಜೇಗೌಡರು ಭಾಗವಹಿಸಿ, 25 ವರ್ಷದ ಹಿಂದೆ ಅವರ ಜೀವನ ಶೈಲಿಯನ್ನು ವಿವರಿಸುತ್ತ, ಅವರ ನಡಿಗೆ, ಜೇನು, ಹಣ್ಣು ಸೇವನೆ ಹಾಗೂ ದಿನಕ್ಕೆ ಒಂದು ಬಾರಿ ಮಾಡುತ್ತಿದ್ದ ಊಟದ ಬಗ್ಗೆ ತಿಳಿಸಿದರು. ಈಗಿನ ಜೀವನ ಶೈಲಿಯಲ್ಲಿ ಟೀ-ಕಾಫಿ, ತಿಂಡಿ ಪದಾರ್ಥಗಳು ಹೆಚ್ಚಾಗಿವೆ ಎಂದು ವಿಷಾದಿಸಿದರು.

ಕಾರ್ಯಕ್ರಮದಲ್ಲಿ ಯೋಜನಾಧಿಕಾರಿಗಳಾದ ಶ್ರೀ ಬಿ.ಎಂ. ಚಂದ್ರಶೇಖರ್, ಸಂಯೋಜನಾಧಿಕಾರಿಗಳಾದ ಶ್ರೀ ಚಿನ್ನಸ್ವಾಮಿ ಹಾಗೂ ಸಿಬ್ಬಂದಿ ವರ್ಗದವರು ಭಾಗವಹಿಸಿದ್ದರು.

## ನಿಧನ

ದಿನಾಂಕ 20.2.2019 ಬುಧವಾರದಂದು ಸ್ವರ್ಗಸ್ಥರಾದ ಜೆಎಸ್‌ಎಸ್ ಆಸ್ಪತ್ರೆಯ ಶುಶ್ರೂಷಕಿಯಾದ ಶ್ರೀಮತಿ ಎಸ್.ಆರ್. ವಸಂತಲಕ್ಷ್ಮೀ (34) ಅವರ ಗೌರವಾರ್ಥ ಆಸ್ಪತ್ರೆಯಲ್ಲಿ ಸಂತಾಪಸೂಚನಾ ಸಭೆ ನಡೆಸಲಾಯಿತು. ಸಭೆಯಲ್ಲಿ ಉಪಸ್ಥಿತರಿದ್ದ ಆಸ್ಪತ್ರೆಯ ನಿರ್ದೇಶಕರು, ವೈದ್ಯಕೀಯ ಅಧೀಕ್ಷಕರು, ನರ್ಸಿಂಗ್ ವಿಭಾಗದ ಮುಖ್ಯಸ್ಥರು ಮತ್ತು ಸಿಬ್ಬಂದಿವರ್ಗದವರು ಶ್ರೀಮತಿ ವಸಂತಲಕ್ಷ್ಮಿಯವರಿಗೆ ಭಾವಪೂರ್ಣ ಶ್ರದ್ಧಾಂಜಲಿಯನ್ನು ಅರ್ಪಿಸಿ ದಿವಂಗತರ ಆತ್ಮಕ್ಕೆ ಶಾಂತಿಯನ್ನು ಕೋರಿದರು. ಅವರ ಕುಟುಂಬವರ್ಗಕ್ಕೆ ಈ ದುಃಖವನ್ನು ಭರಿಸುವ ಶಕ್ತಿಯನ್ನು ಭಗವಂತನು ನೀಡಲೆಂದು ಪ್ರಾರ್ಥಿಸಿ ಎರಡು ನಿಮಿಷ ಕಾಲ ಮೌನ ಆಚರಿಸಲಾಯಿತು.

## ENGLISH SECTION

### MONTHLY REPORT - JANUARY 2019

- Special Lecture Series under IQAC banner was held at JSS Law College, Mysore on 12.1.20019 in which Senior Advocate Sri K Aravind Kamath spoke on 'Justice H. R. Khanna - The Immortal Judge'. In his lecture Sri Kamath cited that the former Supreme Court Judge, Justice Hans Raj Khanna was an example for every aspiring advocate as he was a man who never betrayed his conscience which was evident from his meny landmark judgements. like the Habeas Corpus case during the emergency. When the Five-member bench heard the case, Sri Khanna was the only dissfwter upholding the judiciary.

- A Special meeting was convened for the final year students of the college (B.A., LL.B, B.B.A., LL.B and LL.B courses) on 11. 1.2019 to brief on the conduct of Practical Classes. The meeting was presided by Prof. K.S. Suresh, Chief Executive, Dr. S. Nataraju, Principal and Course Teachers were present.

- The National Voters' Day was observed on 25. 1.2019 and the Voters' Day Oath was administered by Dr S. Nataraju, Principal to the staff and students. He highlighted the significance of the Day and spoke to encourage more young voters. Miss Anvitha, IV Semester LL.B and Miss Pavani Randeo, VI Semester B.B.A., LL.B spoke on the significance of Voters' Day and the Voters' Rights.

- Republic Day Celebrations was observed in the college on 26. 1.2019. Dr Midatala Rani, Professor and Director of UGC-HRDC, Mysuru was the Chief Guest of the celebrations. The celebrations commenced with the hoisting of flag by the Chief Guest, followed by singing of National Anthem and Flag Song. After the Chief Guests speech, cultural events whne followed with a theme depicting the culture of various States of the country. Students of IV Semester LL.B and Cultural Club were the organisers of the Republic Day celebrations. Finally sweets were distributed to staff and students of the college.

**Students' Awards Accomplishments/ Participation**

- Yi-Yuva and Amritha Vidyalaya, Mysuru organised debate competition on 'Is India Crypto Ready?', on 11. 1.2019 at Amritha Vidyalaya in which Mr. Abdulla Mannan Khan (VI Semester LL.B) and Miss Rasmiya Sheikh (IV Semester LL.B) secured First

Place; Mr Thapo Shresta (II Semester B.A., LL.B) and Miss Harshika Suresh (II Semester B.B.A., LL.B) secured Third Place in the debate competition.

- Sri Arjun Unnikrishnan of VIII Semester B.B.A., LL.B, Sri C. Thapo Shreshta of II Semester B.A., LL.B and Sri P.V. Arjun of IV Semester B.A., LL.B participated and secured 'Semi Finalist' title during the XIX All India Moot Court Competition for Adv. T.S. Venkateshwara Iyer Memorial Ever rolling Trophy conducted by the Moot Court Club, His Highness Maharaja's Government Law College, Ernakulam from 25th- 27th Jan. 2019.

- Miss Saloni Olivera, VI Semester B.A. LL.B, Miss R. Dhanyatha and Miss R. Shanyashri of VI Semester B.B.A.,LL.B, Miss C. Supritha and Miss Payal Emily Pereira of IV Semester B.B.A.,LL.B and Miss Surabhi S N, VI Semester B.A.,LL.B participated in the Republic Day Parade on 26. 1.2019 at Bannimantap and won the third prize for drill. Flying Officer Dr. N. Vani Shree also participated in the event.

## Workshiop Held

A workshop on "Financial literacy for financial inclusion" by Ms.R. Bhagyashree. Trainer, Learning Links Foundation, Bengaluru has been arranged at the JSS Polytechnic for women, Mysuru for final year students of CP, CS, E&C Department

## Lecture Held

A Guest lecture on "Basic Principles of Income Tax" by Sri S. Ganesh, Asst. Registrar and Asst. Administrative Officer, District Consumer forum, Mysuru, has been arranged on 17-1-2019 Polytechnic for the benefit of fourth and VI semester students of CP department.

## Advanced 3D Software

A Guest lecture on "Advanced 3D Software in Architecture" by Ms. Chaithra CADD Center, Mysuru, has been arranged on 24-1-2019 for the benefit of IV and XI semester students of AR department In the Polytechnic.

## Workshop on Equity Valuation at

JSS Centre for Management Studies Department of Management Studies, Sri Jayachamarajendra College of Engineering JSS Science and Technology University, Mysuru, organized a work shop on ` Equity Valuation' on 3.1.2019

Sri Balaji Rao, Founder, Sapien Knowledge Ventures, Bangalore, who inaugurated the workshop was the resourceperson for this workshop. The workshop started with introduction to

planning the start-ups and explained the participants about the valuation process of a typical firm. This activity helped the students to know how to raise the capital and business process. Discussions includes Purpose of Asset Allocation, Cyclical Asset Performances, Risk-Return based Asset Allocation Simulations. he introduced the technical aspects like bootstrap, disruptive company, first most advantage. etc The Afternoon session covered the process of customer acquisition, method of computations of customer acquisition and valuation of the project in detail. The workshop also covered the live market sessions.

Dr. P. Nagesh, Professor and HoD, convened and Sri B.S. Sharath, Assistant professor coordinated the programme.

A workshop on SEO and Google Analytics was organized on 9th Jan 2019. The workshop was organized for MBA (Retail Management) and MBA (Digital Marketing) students of JSS CMS. The resource persons of theis workshop were Mr. Senthil Hariram Kumar, Director, Marketing and Mr. Kabilan, of Stan Ventures, Bangalore.

The resource persons have provided inputs on the said topic very interestingly, and covered the objective of delivering the knowledge of SEO and GOOGLE Analytics. Also given hands on practice of the two topics which is a part of MBA syllabus and curriculum for both the specialization students. Mr. Senthil said that the digital Marketing as a MBA specialization is quite the need of the hour in the industry. Further, he emphasized on the need of skilled talents in Digital Marketing area. He also said that in order to drive customers into the marketing funnel, it is indeed a necessity to have a presence on digital platforms. MBA students of JSS CMS were have witnessed an interactive sessions in this workshop. Dr P Nagesh, Professor and HoD, convened the workshop and Dr. Swaroop Simha, Professor coordinated the event.

## Workshop on Search Engine Optimization

JSS Centre for Management Studies Department of Management Studies, Sri Jayachamarajendra College of Engineering, JSS Science and Technology University Mysuru, organized a workshop on ` Search Engine Optimization and Google Analytics' at JSS Centre for Management Studies on 9.1.2019.

The workshop was organized for MBA (Retail Management) and MBA (Digital Marketing) students of The resourcepersons of the workshop were Sri Senthil Hariram Kumar, Director,

Marketing and Sri Kabilan, Officer-Training, Stan Ventures, Bangalore.

The resourcepersons provided inputs on the topic very interestingly and delivered the knowledge of SEO and GOOGLE Analytics. They also gave a practice of the topics, a part of MBA syllabus. Sri Senthil said that the digital Marketing as a MBA specialization is the need of the hour in the industry. He emphasized on the need of skilled talents in Digital Marketing area. He also said that in order to drive customers into the marketing field, it is necessiary to have a presence on digital platforms. the students witnessed an interactive sessions in this workshop. Dr. P. Nagesh, Professor and HoD, convened the workshop and Dr. Swaroop Simha, Professor co-ordinated the event.

Dr. Ramesh Arby Bettagere, PhD Consulting Speech - Language Pathologist and Audiologist, Louisiana, USA served as a guest faculty at **JSS Institute of Speech and Hearing, Dharwad** between 29.1.2019 to 15.2.2019. Mr. Bagali, Administrative officer, JSS Mahavidyapeetha and Dr. Jijo P. M. Principal, JSS Institute of Speech and Hearing, Dharwad received him at the institute. Dr. Betagere, an inspiring teacher, engaged himself in various activities of the institute such as interaction with students, critical evaluation of research presentations, client supervision of fluency and voice disorders. Etc. He was actively involved in teaching students on the topic "Management of Fluency Disorders". He was instrumental in getting access to 'Master Clinician' website of USA which will be a great benefit to Diagnosticians and Therapy Clinicians.

Dr. Bettagere served as a Resource Person in one day in-house workshop on "Assessment and Management of Fluency Disorders conducted on 14.2.2019. the discussed about management techniques of stuttering in adults and children. And demonstrated Wain techniques using videos. In the afternoon, he emphasized the importance of report writing such as Lesson Plan and Progress report. Sample Reports were shown to the students.

A farewell was organized on 15. 2.2019 in the presence of Mr. Bagali, Administrative officer, JSS Mahavidyapeetha, Dr.Jijo P.M. Principal, JSS Institute of Speech and Hearing, Dharwad, Staff and students. The farewell a memento to Dr. Bettagere in appreciation of his services.

Dr. Bettagere appreciated the management, Principal, faculty members and students for their kind gesture.



ಮೈಸೂರಿನ ಜೆಎಸ್‌ಎಸ್ ಆಯುರ್ವೇದ ಕಾಲೇಜಿನಲ್ಲಿ ನಡೆದ ಪದವೀಧರರ ದಿನಾಚರಣೆಯಲ್ಲಿ ಡಾ. ಲಕ್ಷ್ಮೀಶ ಉಪಾಧ್ಯ, ಶ್ರೀ ಆರ್. ಮಹೇಶ್, ಡಾ. ಎಸ್. ಸಚ್ಚಿದಾನಂದ್, ಡಾ. ಸಿ.ಜಿ. ಬೆಟಸೂರಮಠ, ಡಾ. ಬಿ.ಆರ್. ರಾಮಕೃಷ್ಣ, ಡಾ. ರಾಜೇಶ್ ಎ ಉಡುಪುಡಿಯವರೊಂದಿಗೆ ಪದವೀಧರರು




ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆ, ಜೆಎಸ್‌ಎಸ್ ಮೆಡಿಕಲ್ ಕಾಲೇಜು ಮತ್ತು ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆ ಹಾಗೂ ಜೆಎಸ್‌ಎಸ್ ಹಾಸ್ಪಿಟಲ್ ಅಡ್ಮಿನಿಸ್ಟ್ರೇಷನ್ ವಿಭಾಗದ ಸಹಯೋಗದೊಂದಿಗೆ ನಡೆದ ಹಾಸ್ಪಿಟಲ್ ಅಡ್ಮಿನಿಸ್ಟ್ರೇಷನ್ ಕಾನ್‌ಕ್ಲೇವ್ ಕಾರ್ಯಕ್ರಮದಲ್ಲಿ ಡಾ. ಎಚ್.ಕೆ. ಮಮತ, ಡಾ. ಗುರುಸ್ವಾಮಿ, ಡಾ. ಜೆ.ಎನ್. ರಾವ್, ಡಾ. ಸಿ.ಜಿ. ಬೆಟಸೂರಮಠ, ಡಾ. ದಯಾನಂದ, ಡಾ. ಪಿ.ವಿ. ವಿಜಯರಾಘವನ್



ಮೈಸೂರಿನ ಸರಸ್ವತಿಪುರಂನಲ್ಲಿರುವ ಜೆಎಸ್‌ಎಸ್ ಮಹಿಳಾ ಪದವಿ ಕಾಲೇಜಿನಲ್ಲಿ ನಡೆದ ಕನ್ನಡಕಂಪು ಮತ್ತು ಜೀವಶ್ರುತಿ ಧ್ವನಿಸುರಳಿ ಬಿಡುಗಡೆ ಸಮಾರಂಭವನ್ನು ಶ್ರೀ ಕೆ. ಸುಚೇಂದ್ರ ಪ್ರಸಾದ್‌ರವರು ಉದ್ಘಾಟಿಸಿದರು. ಚಿತ್ರದಲ್ಲಿ ಡಾ. ಎಸ್.ಪಿ. ಉಮಾದೇವಿ, ಪ್ರೊ. ಮೊರಬದ ಮಲ್ಲಿಕಾರ್ಜುನ, ಡಾ. ಸಿ.ಜಿ. ಬೆಟಸೂರಮಠ, ಡಾ. ಶಂಭು ವಿ. ಬಳಿಗಾರ, ಡಾ. ಕೆ.ವಿ. ಸುರೇಶ್, ಡಾ. ಎಚ್.ಬಿ. ಸುರೇಶ್

Registered with the Registrar of Newspapers for India No. KARBIL/2014/66470
'JSS Varthapathra' Monthly, Vol. 3, Issue No. 15 March 2019




ಸುತ್ತೂರು ಜಾತ್ರಾ ಮಹೋತ್ಸವದಲ್ಲಿ ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಸಾಮೂಹಿಕ ವಿವಾಹ ಸಮಾರಂಭವು ನೆರವೇರಿದ ಸಂದರ್ಭದಲ್ಲಿ ನೆರೆದಿದ್ದ ಗಣ್ಯರು ಹಾಗೂ ಮಠಾಧೀಶರ ಸಮ್ಮುಖದಲ್ಲಿ ದಾಂಪತ್ಯಜೀವನಕ್ಕೆ ಅಡಿಯಿಟ್ಟ ೧೮೨ ಜೋಡಿಗಳು




ಸುತ್ತೂರು ಜಾತ್ರಾ ಮಹೋತ್ಸವದಲ್ಲಿ ಧಾರ್ಮಿಕಸಭೆಯನ್ನು ಪರಮಪೂಜ್ಯ ಜಗದ್ಗುರುಗಳವರ ದಿವ್ಯ ಸಾನ್ನಿಧ್ಯದಲ್ಲಿ ಶ್ರೀ ಸಿದ್ಧಲಿಂಗ ಮಹಾಸ್ವಾಮಿಗಳವರ ಸಮ್ಮುಖದಲ್ಲಿ ಶ್ರೀ ಅನಂತಕುಮಾರ್ ದತ್ತಾತ್ರೇಯ ಹೆಗ್ಡೆಯವರು ಉದ್ಘಾಟಿಸಿದರು. ಚಿತ್ರದಲ್ಲಿ ಶ್ರೀ ಎಸ್.ಬಿ. ಮಹಮ್ಮದ್ ದಾರಿಮಿ, ರೆ. ಲೆಸ್ಲಿ ಮೊರಾಸ್, ಸಾಲೂರು ಶ್ರೀಗಳು, ಕುಂದೂರು ಶ್ರೀಗಳು, ಶ್ರೀ ಲಕ್ಷ್ಮೀ ಸೇನ ದಿಗಂಬರ ಜೈನ ಮಠದ ಶ್ರೀಗಳು ಇದ್ದಾರೆ

ಸಂಪಾದಕ: **ಡಾ. ಬಿ. ಪ್ರಭುಸ್ವಾಮಿ ಕಟ್ನವಾಡಿ** ನೆರವು: **ಆರ್.ಎಸ್. ಪೂರ್ಣಾನಂದ** ಸಹ ಸಂಪಾದಕ: **ಮ.ಗು. ಬಸವಣ್ಣ**
ಪ್ರಕಾಶಕರು: ಜೆಎಸ್ಎಸ್ ಮಹಾವಿದ್ಯಾಪೀಠ, ಡಾ. ಶ್ರೀ ಶಿವರಾತ್ರಿ ರಾಜೇಂದ್ರ ವೃತ್ತ, ಮೈಸೂರು 570 004
ದೂರವಾಣಿ: 0821-2548212 Extn. 223 * e-mail: jssmasapatrike@gmail.com * website: www.jssonline.org
ಮುದ್ರಣ: ಜೆಎಸ್ಎಸ್ ಪ್ರಿಂಟಿಂಗ್ ಪ್ರೆಸ್, ಮೈಸೂರು